ಸೌಹಾರ್ದ ಸಹಕಾರಿ ಚಳವಳಿಯ ಅಭಿವೃದ್ಧಿಗೆ ಮೀಸಲಾಗಿರುವ ಏಕೈಕ ಮಾಸಪತ್ರಿಕೆ

# ಸ್ವಾಭಿಮಾನಿ ಸಹಕಾರಿ

Swabhimani Sahakari

ಸ್ವಾಯತ್ತತೆ
ಸ್ವಯಂ ಆಡಳಿತ
ಸ್ವಯಂ ನಿಯಂತ್ರಣ
ನಮ್ಮ ಧ್ಯೇಯ

Volume - 12
Issue - 6
Pages - 20
₹ - 12
June - 2015




ಸೌಹಾರ್ದ ಸಹಕಾರಿಗಳ ಸಂಖ್ಯೆ : 3219 ‘ಇ’ ಸ್ಟಾಂಪಿಂಗ್ ಕೇಂದ್ರಗಳ ಸಂಖ್ಯೆ : 797

# ಸಹಕಾರಿಗಳ ನಿರ್ದೇಶಕರುಗಳಿಗೆ ಆಡಳಿತ ಹಾಗೂ ವೃತ್ತಿ ಪರಿಣಿತಿ ಅಗತ್ಯ



ಆತ್ಮೀಯ ಸಹಕಾರಿ ಬಂಧುಗಳೇ,

ರಾಜ್ಯದ ಸೌಹಾರ್ದ ಸಹಕಾರಿ ಕ್ಷೇತ್ರದ ಈ ವೇಗದ ಬೆಳವಣಿಗೆ, ವಿಭಿನ್ನ ರೀತಿಯ ಕಾರ್ಯಚಟುವಟಿಕೆಗಳು, ಅಭೂತಪೂರ್ವ ಸಾಧನೆ, ಸರಕಾರದ ಹಾಗೂ ಸಾರ್ವಜನಿಕರ ಮನ್ನಣೆಗಳು ಸೌಹಾರ್ದ ಸಹಕಾರಿ ಕ್ಷೇತ್ರದಲ್ಲಿರುವವರಿಗೆಲ್ಲ ಸಂತೋಷ ಹಾಗೂ ತೃಪ್ತಿಯನ್ನು ತಂದಿದೆ ನಿಜ. ಆದರೆ ನಮ್ಮನ್ನು ನೋಡುವವರು, ನಮ್ಮ ಬೆಳವಣಿಗೆಯನ್ನು ಸಹಿಸದಿರುವವರು, ನಮ್ಮ ಬೆಳವಣಿಗೆಗೆ ಅಡ್ಡಿ ಮಾಡುವವರೂ ಸಾಕಷ್ಟು ಜನರಿದ್ದಾರೆ. ಇವರುಗಳ ಬಗ್ಗೆ ಸಹಕಾರಿಗಳ ಅಧ್ಯಕ್ಷರು, ಆಡಳಿತ ಮಂಡಲಿ ನಿರ್ದೇಶಕರು, ಮುಖ್ಯಕಾರ್ಯನಿರ್ವಾಹಕರು ಹಾಗೂ ಸದಸ್ಯರೂ ಸಹ ಜಾಗೃತಿಯಿಂದ ಇರುವುದು ಅವಶ್ಯಕ.

ಎಲ್ಲ ಬಲ್ಲವರಿಲ್ಲ. ಬಲ್ಲವರು ಬಹಳಿಲ್ಲ. ಅಂದಹಾಗೆ ಸಹಕಾರ ಕ್ಷೇತ್ರದಲ್ಲಿ ಕಾರ್ಯನಿರ್ವಹಿಸುವ ವಿಶೇಷವಾಗಿ ಸಹಕಾರಿಗಳ ನಿರ್ದೇಶಕರುಗಳಿಗೆ ಇದು ಉದ್ಯೋಗವಲ್ಲ ನಿಜ. ಇವರನ್ನು ಸಮುದಾಯದ ಅಭಿವೃದ್ಧಿಯಲ್ಲಿ ಮುಂದಾಳತ್ವವನ್ನು ವಹಿಸಿರುವ ಸಾರ್ವಜನಿಕ ಸೇವಾನಿರತರು ಎಂದು ಗುರುತಿಸಬಹುದು. ಮುಂದಾಳತ್ವ ಅಂದರೆ ನಾಯಕತ್ವವನ್ನು ವಹಿಸಿಕೊಂಡಿರುವ ನಿರ್ದೇಶಕರುಗಳು ತಾವು ಕಾರ್ಯನಿರ್ವಹಿಸುತ್ತಿರುವ ಈ ಕ್ಷೇತ್ರದ ಬಗ್ಗೆ ಸಂಪೂರ್ಣ ಮಾಹಿತಿಯನ್ನು ಹೊಂದುವುದು ಅವಶ್ಯಕ. ಪ್ರಜಾಪ್ರಭುತ್ವದ ತಳಹದಿಯ ಮೇಲೆ ಕಾರ್ಯನಿರ್ವಹಿಸುತ್ತಿರುವ ಹಾಗೂ ಸಾಮಾಜಿಕ ಬದ್ಧತೆಯನ್ನು ಹೊಂದಿರುವ ಈ ಕ್ಷೇತ್ರದಲ್ಲಿ ನಿರ್ದೇಶಕರುಗಳಿಗೆ ಜವಾಬ್ದಾರಿ ಹೆಚ್ಚಿನದಿದೆ. ಕೇವಲ ಸಭೆ ಕರೆದಾಗ ಬಂದು ಹೋಗುವುದು ಮಾತ್ರವಲ್ಲ. ಸಹಕಾರಿಯ ದೈನಂದಿನ ಚಟುವಟಿಕೆಗಳಲ್ಲಿ ಮಾರ್ಗದರ್ಶನ ಮಾಡುವ ಅಧಿಕಾರ ಉಳ್ಳವರಾಗಿದ್ದಾರೆ.

ಮಾರ್ಗದರ್ಶನ ಮಾಡುವ ಸಹಕಾರಿಗಳ ನಿರ್ದೇಶಕರು ಸಹಕಾರಿ ತತ್ವ, ಆಡಳಿತ ವ್ಯವಸ್ಥೆ, ಲೆಕ್ಕಪತ್ರಗಳ ವಿಧಾನ, ಲೆಕ್ಕಪರಿಶೋಧನೆಯ ವಿಧಾನ, ದೇಶದ ರಾಜ್ಯದ ಸಹಕಾರ ಚಳುವಳಿಯ ಪ್ರಚಲಿತ ವಿದ್ಯಮಾನಗಳು, ವಿಶ್ವದ ಸಹಕಾರ ಚಳುವಳಿಯ ವಿದ್ಯಮಾನಗಳು ಇತ್ಯಾದಿಗಳ ಬಗ್ಗೆ ಮಾಹಿತಿ ಹೊಂದಿ, ಆಡಳಿತ ಪರಿಣಿತಿ ಹಾಗೂ ವೃತ್ತಿ ಪರಿಣಿತಿಯನ್ನು ಹೊಂದುವುದು ಅವಶ್ಯಕ. ಆದ್ದರಿಂದಲೇ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯು ಸೌಹಾರ್ದ ಸಹಕಾರಿಗಳ ನಿರ್ದೇಶಕರುಗಳಿಗಾಗಿ ಆಡಳಿತ ಪರಿಣಿತಿ ತರಬೇತಿ ಕಾರ್ಯಕ್ರಮಗಳನ್ನು ಪ್ರತಿವರ್ಷವೂ ಹಮ್ಮಿಕೊಳ್ಳುತ್ತಾ ಬಂದಿದೆ.

ರಾಜ್ಯದ ಸೌಹಾರ್ದ ಸಹಕಾರಿ ಕ್ಷೇತ್ರದ ಬೆಳವಣಿಗೆಯಲ್ಲಿ ನಿರ್ದೇಶಕರುಗಳ ಪಾತ್ರ ಅತ್ಯಂತ ಮಹತ್ವದ್ದಾಗಿದೆ. ಸಂಯುಕ್ತ ಸಹಕಾರಿಯು ಏರ್ಪಡಿಸುವ ಹಾಗೂ ಈ ಕ್ಷೇತ್ರ ವಿವಿಧ ಸಹಕಾರಿ ಸಂಘಟನೆಗಳು ನೀಡುವ ಎಲ್ಲಾ ವಿಧವಾದ ತರಬೇತಿ ಕಾರ್ಯಕ್ರಮಗಳಲ್ಲಿ ಸಕ್ರಿಯವಾಗಿ ಭಾಗವಹಿಸಿ, ನಿಮ್ಮ ವ್ಯಕ್ತಿತ್ವವನ್ನು ಬೆಳೆಸಿಕೊಳ್ಳಿ, ಆಡಳಿತ ಪರಿಣಿತಿಯನ್ನು ಹೆಚ್ಚಿಸಿಕೊಳ್ಳಿ, ಸೌಹಾರ್ದ ಸಹಕಾರಿ ಕ್ಷೇತ್ರದ ಅಭಿವೃದ್ಧಿಯ ಪಾಲುದಾರರಾಗಿ.

**ಗುರುನಾಥ ಜಾಂತಿಕರ,** ಅಧ್ಯಕ್ಷರು

“ಮುಂದಾಳತ್ವ ಅಂದರೆ ನಾಯಕತ್ವವನ್ನು ವಹಿಸಿಕೊಂಡಿರುವ ನಿರ್ದೇಶಕರುಗಳು ತಾವು ಕಾರ್ಯನಿರ್ವಹಿಸುತ್ತಿರುವ ಈ ಕ್ಷೇತ್ರದ ಬಗ್ಗೆ ಸಂಪೂರ್ಣ ಮಾಹಿತಿಯನ್ನು ಹೊಂದುವುದು ಅವಶ್ಯಕ. ಪ್ರಜಾಪ್ರಭುತ್ವದ ತಳಹದಿಯ ಮೇಲೆ ಕಾರ್ಯನಿರ್ವಹಿಸುತ್ತಿರುವ ಹಾಗೂ ಸಾಮಾಜಿಕ ಬದ್ಧತೆಯನ್ನು ಹೊಂದಿರುವ ಈ ಕ್ಷೇತ್ರದಲ್ಲಿ ನಿರ್ದೇಶಕರುಗಳಿಗೆ ಜವಾಬ್ದಾರಿ ಹೆಚ್ಚಿನದಿದೆ. ಕೇವಲ ಸಭೆ ಕರೆದಾಗ ಬಂದು ಹೋಗುವುದು ಮಾತ್ರವಲ್ಲ.”

## ಸ್ವಾಭಿಮಾನಿ ಸಹಕಾರಿ ಸಂಪಾದಕ ಮಂಡಳಿ

**ಶ್ರೀ ಗುರುನಾಥ ಜಾಂತಿಕರ**
ಗೌರವ ಅಧ್ಯಕ್ಷರು

**ಶ್ರೀ ಹೆಚ್.ವಿ.ರಾಜೀವ**
ಗೌರವ ಉಪಾಧ್ಯಕ್ಷರು

**ಶ್ರೀ ಎಸ್.ಆರ್.ಸತೀಶಚಂದ್ರ**
ಗೌರವ ಸದಸ್ಯರು

**ಶ್ರೀ ಶರಣಗೌಡ ಜಿ. ಪಾಟೀಲ್**
ಸಂಪಾದಕರು

**ಶ್ರೀ ವಿ.ಜೆ.ಕಾರಕೂನ**
ಸಂಚಾಲಕರು

**ಶ್ರೀ ರಘುನಂದನ ಕೆ.**
ಸದಸ್ಯರು

## ಒ ಳ ಪು ಟ ಗ ಳ ಲ್ಲಿ . . .

ಜ್ಞಾನ ಜ್ಯೋತಿ ........ 4

ಸಾಧನೆಯ ಹಾದಿಯಲ್ಲಿ ಪ್ರತಿ ಹೆಜ್ಜೆ ಮಹತ್ವದ್ದು – ಹೆಚ್.ವಿ. ರಾಜೀವ ........ 5

ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾಲಯದಲ್ಲಿ "ಯುವಕರು ಹಾಗೂ ಸಹಕಾರ" ಸಂವಾದ ಕಾರ್ಯಕ್ರಮ ........ 6

ಪಟ್ಟಣ ಸೌಹಾರ್ದ ಸಹಕಾರಿ ಬ್ಯಾಂಕುಗಳ ಮುಖ್ಯಕಾರ್ಯನಿರ್ವಾಹಕರಿಗೆ ಹಾಗೂ ಹಿರಿಯ ಅಧಿಕಾರಿಗಳಿಗಾಗಿ ಕಾರ್ಯಕ್ಷಮತೆ ಅಭಿವೃದ್ಧಿ ಶಿಬಿರ ........ 8

ಸೌಹಾರ್ದ ಸಹಕಾರಿಗಳ ನಿರ್ದೇಶಕರುಗಳಿಗೆ ಎರಡು ದಿನಗಳ ಆಡಳಿತ ಪರಿಣಿತಿ ತರಬೇತಿ ........ 9

ಜೂನ್ 5 ವಿಶ್ವ ಪರಿಸರ ದಿನ ........ 10

ಜೂನ್ 21 ವಿಶ್ವ ಯೋಗ ದಿನ ........ 11

ಶ್ರೀ ಸರಸ್ವತಿ ಕ್ರೆಡಿಟ್ ಸೌಹಾರ್ದ ಸಹಕಾರಿಯ ವಾರ್ಷಿಕ ಕ್ರಿಯಾ ಯೋಜನಾ ಸಭೆ ........ 11

ಸಂಯುಕ್ತ ಸಹಕಾರಿಯ ಅಧ್ಯಕ್ಷ ಶ್ರೀ ಗುರುನಾಥ ಜ್ಯಾಂತಿಕರ ಅವರಿಂದ ಸಿಬಿಡಿಟಿ (ಕೇಂದ್ರ ನೇರ ತೆರಿಗೆ ಮಂಡಳಿ, ನವದೆಹಲಿ) ಅಧ್ಯಕ್ಷರ ಭೇಟಿ ........ 12

ಸಂಯುಕ್ತ ಸಹಕಾರಿ ಅಧ್ಯಕ್ಷರ ಪತ್ರಿಕಾಗೋಷ್ಠಿ ........ 13

ಸಹಕಾರಿ ಕ್ಷೇತ್ರದಿಂದ ಸಮಾಜದ ವಿಕಾಸ – ಒಡಿಯೂರುಶ್ರೀ ........ 14

ಸೌಹಾರ್ದ ಸಹಕಾರಿ ಕ್ಷೇತ್ರದ ಬೆಳವಣಿಗೆಗಾಗಿ ಸಂಯುಕ್ತ ಸಹಕಾರಿಯ ತರಬೇತಿ ಕಾರ್ಯಕ್ರಮಗಳು – ಅವಲೋಕನೆ ........ 15

ಗ್ರಾಹಕ ಸಂಬಂಧ ನಿರ್ವಹಣೆಯ ಮಹತ್ವ ಮತ್ತು ವಿವಿಧ ಹಂತಗಳು ........ 16

ನಿಮ್ಮ ಪ್ರಶ್ನೆ – ನಮ್ಮ ಉತ್ತರ ........ 18

**RBI NEWS- MAY 2015 ........ 19**

# ಸಂಪಾದಕೀಯ

## ಸೌಹಾರ್ದ ಸಹಕಾರಿಗಳ ಸ್ವಾಯತ್ತತೆ, ಸ್ವಯಂ ಆಡಳಿತ ಹಾಗೂ ಸ್ವಯಂ ನಿಯಂತ್ರಣ ಪ್ರಯೋಗ - ಯಶಸ್ವಿ

ಸಹಕಾರ ಚಳುವಳಿಯ ವಿಫಲತೆಗೆ ಸರಕಾರದ ಅತಿಯಾದ ಹಸ್ತಕ್ಷೇಪವೇ ಕಾರಣ. ಸಹಕಾರಿಗಳಿಗೆ ಸ್ವಾಯತ್ತತೆ ನೀಡಬೇಕು, ವ್ಯವಹಾರಿಕ ಸ್ವಾತಂತ್ರ್ಯ ನೀಡಬೇಕು, ಸರಕಾರದ ಪಾತ್ರ ಕಡಿಮೆ ಇರಬೇಕು, ಅಂತಹ ಕಾಯ್ದೆ ರಚನೆಯಾಗಬೇಕು ಎಂದು ಹೇಳಿದ ಅರ್ಧನಾರೀಶ್ವರನ್ ಸಮಿತಿಯ ಶಿಫಾರಸ್ಸಿನ ಮೇರೆಗೆ ಯೋಜನಾ ಆಯೋಗದವರು ಮಾದರಿ ಕಾಯ್ದೆಯನ್ನು ಸಿದ್ಧಪಡಿಸಿ ದೇಶದ ಎಲ್ಲಾ ರಾಜ್ಯಗಳಿಗೆ ಕಳುಹಿಸಿದರು. ಈ ಮಾದರಿ (ಲಿಬರಲ್ ಸಹಕಾರ ಕಾಯ್ದೆ) ಕಾಯ್ದೆ ಅನುಷ್ಠಾನಕ್ಕೆ ಮುಂದಾಗಿದ್ದು 9 ರಾಜ್ಯಗಳು. ಈ ಸ್ವಾಯತ್ತ ಸಹಕಾರಿ ಕಾಯ್ದೆಗಳ ಅನುಷ್ಠಾನದಲ್ಲಿ ಕರ್ನಾಟಕ ಮೇಲ್ಪಂಕ್ತಿಯಲ್ಲಿದೆ. ಕರ್ನಾಟಕದಲ್ಲಿ ಕರ್ನಾಟಕ ಸೌಹಾರ್ದ ಸಹಕಾರಿ ಕಾಯ್ದೆ 1997 ಅನುಷ್ಠಾನಕ್ಕೆ ಬಂದಿದ್ದು 1–1–2001.

ಕಳೆದ 15 ವರ್ಷಗಳಲ್ಲಿ ಈ ಕ್ಷೇತ್ರ ಸಾಧಿಸಿದ ಪ್ರಗತಿ ಶ್ಲಾಘನೀಯ ಹಾಗೂ ಈ ಪ್ರಯೋಗ ಯಶಸ್ವಿ ಎಂದೇ ಹೇಳಬೇಕು. ಕಾರಣ ಕಳೆದ 111 ವರ್ಷಗಳ ಇತಿಹಾಸವಿರುವ ಅಂದರೆ 1959ರ ಸಹಕಾರ ಸಂಘಗಳ ಕಾಯ್ದೆಯಡಿ ಕಾರ್ಯನಿರ್ವಹಿಸುತ್ತಿರುವ ಸಹಕಾರ ಸಂಸ್ಥೆಗಳ ಪ್ರಗತಿಯನ್ನು ಗಮನಿಸಿದಾಗ ಸೌಹಾರ್ದ ಸಹಕಾರ ಕಾಯ್ದೆಯಡಿಯಲ್ಲಿನ ಸಹಕಾರ ಸಂಸ್ಥೆಗಳ ಪ್ರಗತಿ ಮೆಚ್ಚುವಂತಹದ್ದು. ಈ ಅವಧಿಯಲ್ಲಿ ಒಟ್ಟಾರೆ ರಾಜ್ಯದ ಸಹಕಾರಿಗಳ ಕಾರ್ಯನಿರ್ವಹಣೆಯ ಗುಣಮಟ್ಟಗಳಲ್ಲಿ ಸೌಹಾರ್ದ ಸಹಕಾರಿಗಳೇ ಮುಂದಿದ್ದಾರೆ. ಒಂದು ಶತಮಾನದಿಂದ ಸಾಧಿಸಲಾಗದ ಸಾಧಿಸಲೊಪ್ಪದ ಸಾಂಪ್ರದಾಯಿಕತೆಯ ನೆರಳಲ್ಲಿ ಬದುಕುತ್ತಿರುವ ಸಹಕಾರ ಸಂಘಗಳಿಂದ ಸಾಧಿಸಲಾಗದ ಪ್ರಗತಿಯನ್ನು ಸೌಹಾರ್ದ ಸಹಕಾರಿಗಳು ಸಾಧಿಸಿದ್ದಾರೆ.

ಸಮಾಜದ ಪ್ರತಿನಿಧಿಯಾಗಿ ವ್ಯಾವಹಾರಿಕ ಸಂಸ್ಥೆಯಾಗಿ ಸಾಮಾಜಿಕ ಬದ್ಧತೆಯಿಂದ, ಸಾಂಪ್ರದಾಯಿಕತೆಯಿಂದ ಹೊರಬಂದು ಸದಸ್ಯರಿಗೆ ವಿವಿಧ ರೀತಿಯ ಸೌಲಭ್ಯಗಳನ್ನು ಒದಗಿಸುವ ಉದ್ದೇಶಗಳನ್ನು ಹೊಂದಿ, ವಿಭಿನ್ನ ರೀತಿಯ ಚಟುವಟಿಕೆಗಳನ್ನು ಹಮ್ಮಿಕೊಂಡು ಕಾರ್ಯನಿರ್ವಹಿಸುತ್ತಿವೆ. ಗ್ರಾಹಕ, ಮಾರಾಟ, ಸಂಸ್ಕರಣ, ಪತ್ತು, ವ್ಯವಸಾಯ, ಶಿಕ್ಷಣ, ನೌಕರರು, ಕೈಗಾರಿಕೆ, ಸ್ವಸಹಾಯ, ವಿವಿಧೋದ್ದೇಶ, ಬ್ಯಾಂಕಿಂಗ್ ಹೀಗೆ ಎಲ್ಲಾ ಕ್ಷೇತ್ರಗಳಲ್ಲೂ ವೈವಿಧ್ಯತೆಯನ್ನು ಈ ಕ್ಷೇತ್ರದಲ್ಲಿ ಕಾಣಬಹುದಾಗಿದೆ. ಆಧುನಿಕತೆಯ ಹೊಸ ತಂತ್ರಜ್ಞಾನವನ್ನು ಈ ಕ್ಷೇತ್ರದಲ್ಲಿ ಕಾಣಬಹುದಾಗಿದೆ. ಸೌಹಾರ್ದ ಸಹಕಾರಿ ಕ್ಷೇತ್ರ ವಿಶೇಷವಾಗಿ ಯುವಕರನ್ನು ಆಕರ್ಷಿಸುತ್ತಿದೆ. ಸರಕಾರದ, ಸಹಕಾರಿಗಳ ಹಾಗೂ ಸಾರ್ವಜನಿಕರ ಗಮನವನ್ನು ಸೆಳೆಯುತ್ತಿದೆ.

ಕರ್ನಾಟಕ ರಾಜ್ಯದಲ್ಲಿ ಸ್ವಾಯತ್ತ ಕಾಯ್ದೆಯಡಿ (ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ 1997) ರಚನೆಯಾಗಿರುವ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ಕಾರ್ಯನಿರ್ವಹಣೆಯ ಯಶಸ್ಸನ್ನು ಗಮನಿಸಿರುವ ಮಧ್ಯಪ್ರದೇಶ ರಾಜ್ಯ ಸಹಕಾರಿ ನಾಯಕರು ತಮ್ಮ ರಾಜ್ಯದಲ್ಲಿ ಈಗಾಗಲೇ ಅಸ್ತಿತ್ವದಲ್ಲಿರುವ ಸ್ವಾಯತ್ತ ಕಾಯ್ದೆಯಡಿ ಸಂಯುಕ್ತ ಸಹಕಾರಿ ಮಾದರಿಯ ಸಂಸ್ಥೆಯನ್ನು ಸ್ಥಾಪಿಸಲು ಆಸಕ್ತಿ ತೋರಿಸಿದ್ದಾರೆ. ಈ ಕುರಿತು ಈಗಾಗಲೇ ಸಂಯುಕ್ತ ಸಹಕಾರಿಯನ್ನು ಸಂಪರ್ಕಿಸಿದ್ದು, ಇದೊಂದು ಗಮನಾರ್ಹ ಬೆಳವಣಿಗೆಯಾಗಿದೆ.

ಇತ್ತೀಚಿನ ಸೌಹಾರ್ದ ಸಹಕಾರಿ ಅಧಿನಿಯಮ ಕೆಲವು ತಿದ್ದುಪಡಿಗಳು ಮೂಲ ಸೌಹಾರ್ದ ಸಹಕಾರಿ ಕಾಯ್ದೆಯ ಆಶಯಕ್ಕೆ ಪೂರಕವಾಗಿರುವುದಿಲ್ಲವಾದರೂ ಇಷ್ಟೊಂದು ಅಡೆತಡೆಗಳ ಮಧ್ಯೆಯೂ ಈ ಪ್ರಗತಿ ಈ ಸಾಧನೆ ಕರ್ನಾಟಕದ ಸೌಹಾರ್ದ ಸಹಕಾರಿಯ ಮಾದರಿ ವ್ಯವಸ್ಥೆ ಇತರ ರಾಜ್ಯಗಳಿಗೆ ಮಾದರಿ ಎನಿಸಬಹುದಾದ ಈ ಪ್ರಯೋಗ ಯಶಸ್ವಿ ಎಂದು ಹೇಳಬಹುದು. ಈ ಎಲ್ಲ ಧನಾತ್ಮಕ ಬೆಳವಣಿಗೆಯ ನಡುವೆಯೂ, ಕೆಲವೊಂದು ಸೌಹಾರ್ದ ಸಹಕಾರಿಗಳು ಒಂದೇ ಹೆಸರಿನ ಸಮೂಹ ಸಂಸ್ಥೆಗಳ ಹಾಗೂ ಅಂಗ ಸಂಸ್ಥೆಗಳ ಮೂಲಕ ಬೇರೆ ಬೇರೆ ಚಟುವಟಿಕೆಗಳನ್ನು ನಡೆಸುತ್ತಿವೆ. ಠೇವಣಿಗಳಿಗೆ ಅಸಮತೋಲಿತ ಅಧಿಕ ಬಡ್ಡಿಯನ್ನು ನೀಡುತ್ತಿವೆ. ಸದಸ್ಯರಿಗೆ ವಂಚಿಸುವ ಪ್ರಯತ್ನಗಳು ಅಲ್ಲಲ್ಲಿ ಕೇಳಿ ಬರುತ್ತಿವೆ.

ಕೆಲವೇ ಸಂಸ್ಥೆಗಳ ಇಂತಹ ಋಣಾತ್ಮಕ ಕಾರ್ಯಗಳಿಂದಾಗಿ ಸೌಹಾರ್ದ ಸಹಕಾರ ಕ್ಷೇತ್ರದ ಪ್ರಗತಿ ಕುಂಠಿತವಾಗುವ ಸಂಭವವಿರುತ್ತದೆ, ಸೌಹಾರ್ದ ಸಹಕಾರಿಗಳು ಈ ಬಗ್ಗೆ ಗಮನಹರಿಸಿ ಸಂಯುಕ್ತ ಸಹಕಾರಿಯ ಅಧಿಕಾರಿಗಳಿಗೆ ಕೂಡಲೇ ತಿಳಿಸಲು ಕೋರಿದೆ. ಇಂತಹ ಚಟುವಟಿಕೆಗಳನ್ನು ನಡೆಸದೆ, ನಡೆಸಲು ಅವಕಾಶ ಮಾಡಿಕೊಡದೆ ಸೌಹಾರ್ದ ಸಹಕಾರ ಕ್ಷೇತ್ರದ ಬೆಳವಣಿಗೆಗೆ ಕಾರಣವಾಗಬೇಕಿದೆ.

## ಧರ್ಮಕರ್ಮ

ಸತ್ಯವು ಅವಿನಾಶ, ಅಚಲ, ಅಪರಿಮಿತ, ತ್ರಿಕಾಲಾಬಾಧಿತ, ಆದಿಮಧ್ಯಾಂತ ರಹಿತ. ಈ ವೈಶ್ವಿಕ ಸತ್ಯವು ನುಡಿಯಲ್ಲಿ ವ್ಯಕ್ತವಾದರೆ ಅದು ಸದಾಚಾರ, ಸದ್ಧರ್ಮ! ನಮ್ಮ ನಡೆಯಲ್ಲಿ ಸತ್ಯವು ಅಳವಡಿಸಿಕೊಳ್ಳಬೇಕಾದರೆ ನಮ್ಮ ಹೃದಯವು ಪರಿಶುದ್ಧವಾಗ ಬೇಕು. ಹೃದಯಶುದ್ಧಿಗಾಗಿ ನಾವು ಮಾಡುವ ಕರ್ಮಗಳಿಗೆ ಧರ್ಮಕರ್ಮ ಎಂದು ಕರೆಯುತ್ತಾರೆ.



– ಶ್ರೀ ಸಿದ್ಧೇಶ್ವರ ಸ್ವಾಮೀಜಿಯವರ ಉಪನ್ಯಾಸಗಳ ಆಯ್ದ ಭಾಗ

ಮನೆಯ ಮೂಲೆ–ಮೂಲೆಯಲ್ಲಿ ಕಸ ಬಿದ್ದಿದ್ದರೆ, ಅದು ಅರಮನೆಯಾಗಿದ್ದರೂ, ಸೆರೆಮನೆಯೇ! ಧೂಳು ಮೆತ್ತಿದ ಕನ್ನಡಿ ಎಷ್ಟೇ ದೊಡ್ಡದಾಗಿದ್ದರೂ ಅದು ನಮ್ಮ ಮುಖವನ್ನು ತೋರಿಸಲಾರದು. ಚಿನ್ನದ ಪಾತ್ರೆಯಾಗಿದ್ದರೂ ಮಲಿನವಾಗಿದ್ದರೆ ಅದು ನಿಷ್ಪ್ರಯೋಜಕ. ಮನೆಯೊಳಗೆ ಕಸ ತುಂಬಿದ್ದರೆ, ಹೊಸ್ತಿಲಲ್ಲಿ ಹುಲ್ಲು ಬೆಳೆದಿದ್ದರೆ, ಆ ಮನೆಯಲ್ಲಿ ಮನೆಯವರಿಲ್ಲವೆಂದೇ ಅರ್ಥ. ನಮ್ಮ ತನುವೆಂಬ ಈ ಮನೆಯ ಹೊಸ್ತಿಲಲ್ಲಿ ಎಂದರೆ ಮುಖದಲ್ಲಿ 'ಹುಸಿಯ ಹುಲ್ಲು' ಸುಳ್ಳು ತುಂಬಿಕೊಂಡಿದ್ದರೆ, ಮನವೆಂಬ ಮನೆಯೊಳಗೆ ಪ್ರಾಪಂಚಿಕ ವಿಷಯವಾಸನೆ ಅಥವಾ ಆಸೆಯ ಧೂಳು ಬಿದ್ದಿದ್ದರೆ, ಜೀವಾತ್ಮನೆಂಬ ಈ ಮನೆಯೊಡೆಯನು ಜಾಗ್ರತವಾಗಿಲ್ಲವೆಂದೇ ಅರ್ಥ. ಈ ಮನೋಮಾಲಿನ್ಯವೇ ಎಲ್ಲ ಕೋಲಾಹಲಕ್ಕೆ ಕಾರಣ. ಅದರಿಂದ ನಮಗೆ ಒಳ್ಳೆಯದು ಕಾಣುವುದಿಲ್ಲ, ಕೇಳಿಸುವುದಿಲ್ಲ, ರುಚಿಸುವುದಿಲ್ಲ! ಆಗ ಮನುಷ್ಯನು ಕೆಟ್ಟದ್ದನ್ನೇ ತಿನ್ನುತ್ತಾನೆ, ಕುಡಿಯುತ್ತಾನೆ. ಇದುವೇ ಅನಾಚಾರ. ಸದ್ಧರ್ಮ! ಯಾವಾಗ ಮನುಷ್ಯನು ಗುರು–ದೇವರ ಕರುಣೆಯಿಂದ ಎಚ್ಚೆತ್ತು ಸನ್ಮಾರ್ಗದಲ್ಲಿ ನಡೆಯುತ್ತಾನೋ ಆಗ ಆತನ ಅಂತರಂಗ ಅಥವಾ ಮನಸ್ಸು ಪರಿಶುದ್ಧವಾಗಿ ಜೀವನದಲ್ಲಿ ಪರಮಶಾಂತಿ ನೆಲೆಸುತ್ತದೆ! ಆದುದರಿಂದ ನಮ್ಮ ಋಷಿಮುನಿಗಳು 'ಸದಾಚಾರೋ ಹೀ ಧರ್ಮಃ' ಸದಾಚಾರವೇ ಸದ್ಧರ್ಮ ಎಂದು ಹೇಳಿದರು. ಒಳ್ಳೆಯ ಕೆಲಸಗಳನ್ನು ಮಾಡುವುದೇ ದೇಹಕ್ಕೆ ಶೃಂಗಾರ. ಪರಮಸತ್ಯ ಪರಮಾತ್ಮನನ್ನು ಅನುಭವಿಸುವುದೇ ಮನಕ್ಕೆ ಶೃಂಗಾರ. ಆ ಪರಶಿವ ಪರಮಾತ್ಮನ ಅರಿವು ಮಾಡಿಕೊಳ್ಳುವುದೇ ನಮ್ಮ ಆತ್ಮಂಗೆ ಅಲಂಕಾರ! ಇನ್ನು ಸತ್ಯವನ್ನರಿತ ಶಿವಯೋಗಿಗಳಿಗೆ ಶಿವಶರಣರ ಸಂಗವೇ ಶೃಂಗಾರ! ನಾವು ಕೇವಲ ದೋಷವನ್ನೇ ಹುಡುಕುತ್ತಾ ಹೋದರೆ ನಮಗೆ ಈ ಜಗತ್ತಿನಲ್ಲಿ ಒಳ್ಳೆಯದು ಕಾಣುವುದೇ ಇಲ್ಲ! ಆಗಸದಲ್ಲಿ ತೇಲುವ ಮೇಘಗಳು ನಮಗೆ ಕಪ್ಪಾಗಿ ಕಂಡರೂ ಅವುಗಳ ಅಂತರಂಗದಲ್ಲಿ ಪ್ರಪಂಚವನ್ನೇ ಪೋಷಿಸುವ ಅಮೃತದ ಜಲಧಾರೆ ಇದೆ ಎನ್ನುವುದನ್ನು ನಾವು ಮರೆಯಬಾರದು.

ನಾವು ಬಾಡುವ ಗಿಡಕ್ಕೆ ನೀರು ಹನಿಸಬೇಕೇ ವಿನಾ ಕಡಿದು ಹಾಕಬಾರದು. ಈ ಪ್ರಪಂಚದಲ್ಲಿ ನೊಂದವರಿಗೆ ಮೃದುಮಧುರ ಮಾತುಗಳನ್ನಾಡಿ ಸಂತೈಸಬೇಕು.

## 4 ಜುಲೈ 2015 ಅಂತರರಾಷ್ಟ್ರೀಯ ಸಹಕಾರಿ ದಿನಾಚರಣೆ – "ಸಹಕಾರ ಆಯ್ಕೆ, ಸಮಾನತೆಯ ಆಯ್ಕೆ"



COPAC (ಕಮಿಟಿ ಫಾರ್ ದಿ ಪ್ರಮೋಷನ್ ಅಂಡ್ ಅಡ್ವಾನ್ಸ್‌ಮೆಂಟ್ ಆಫ್ ಕೋ–ಆಪರೇಟಿವ್)ನ ಮೂಲಕ ಅಂತರರಾಷ್ಟ್ರೀಯ ಕೋ ಆಪರೇಟೀವ್ ಅಲೈನ್ಸ್ ಮತ್ತು ಯುನೈಟೆಡ್ ನೇಷನ್ಸ್‌ಗಳು ಜಂಟಿಯಾಗಿ ಪ್ರತಿವರ್ಷ ಆಚರಿಸುತ್ತಿರುವ ಅಂತರರಾಷ್ಟ್ರೀಯ ಸಹಕಾರ ದಿನದ ಅಂಗವಾಗಿ 2015ರ ಸಹಕಾರ ದಿನದ ಉದ್ದೇಶ 'ಸಮಾನತೆ' ಎಂದು, "ಸಹಕಾರ ಆಯ್ಕೆ, ಸಮಾನತೆಯ ಆಯ್ಕೆ" ಎಂದು ಘೋಷಿಸಲಾಗಿದೆ.

ಅಂತರರಾಷ್ಟೀಯ ಸಹಕಾರಿ ದಿನವನ್ನು ಪ್ರತಿ ವರ್ಷ ಜುಲೈ ಮೊದಲನೆಯ ಶನಿವಾರದಂದು ಆಚರಿಸಲಾಗುತ್ತಿದೆ. ಈ ವರ್ಷ 4 ಜುಲೈ 2014ರಂದು ಅಂತರರಾಷ್ಟ್ರೀಯ ಸಹಕಾರಿ ದಿನವನ್ನಾಗಿ ಆಚರಿಸಲಾಗುತ್ತಿದ್ದು, ಈ ಆಚರಣೆಯ ಮುಖ್ಯ ಉದ್ದೇಶವೆಂದರೆ ಸಹಕಾರಿ ಕ್ಷೇತ್ರದ ಬಗ್ಗೆ ಜಾಗೃತಿಯನ್ನು ಹೆಚ್ಚಿಸುವುದು ಮತ್ತು ಚಳುವಳಿಯ ಯಶಸ್ಸಿನ ಪ್ರಚಾರ ಮತ್ತು ಅಂತರರಾಷ್ಟ್ರೀಯ ಒಗ್ಗಟ್ಟು, ಆರ್ಥಿಕ ದಕ್ಷತೆ, ಸಮಾನತೆ ಮತ್ತು ವಿಶ್ವ ಶಾಂತಿಯ ಆದರ್ಶಗಳನ್ನು ಪ್ರಚಾರ ಮಾಡುವುದಾಗಿದೆ.

### ಸಂಯುಕ್ತ ಸಹಕಾರಿಯ ನಿರ್ದೇಶಕರ ಸೌಹಾರ್ದ ಸಹಕಾರಿಗಳ ಮುಖ್ಯಕಾರ್ಯನಿರ್ವಾಹಕರಿಗೆ ವೃತ್ತಿಪರಿಣಿತಿ ತರಬೇತಿ

# ಸಾಧನೆಯ ಹಾದಿಯಲ್ಲಿ ಪ್ರತಿ ಹೆಜ್ಜೆ ಮಹತ್ವದ್ದು – ಹೆಚ್.ವಿ. ರಾಜೀವ



**8 ಮೇ 2015, ಬೆಂಗಳೂರು :** ರಾಜ್ಯದ ಸಂಯುಕ್ತ ಸಹಕಾರಿಯ ನಿರ್ದೇಶಕರುಗಳು ಪ್ರತಿನಿಧಿಸುತ್ತಿರುವ ಸೌಹಾರ್ದ ಸಹಕಾರಿಗಳ ಪರಿವೀಕ್ಷಣೆಯನ್ನು ಮಾಡಿ ಅವುಗಳಲ್ಲಿಯ ಉತ್ತಮ ಅಂಶಗಳನ್ನು ಇತರರಿಗೆ ತಿಳಿಯಪಡಿಸುವ ಹಾಗೂ ಲೋಪದೋಷಗಳನ್ನು ಸರಿಪಡಿಸಿಕೊಂಡು ಉತ್ತಮ ಗುಣಮಟ್ಟದ್ದಾಗಿ ಎತ್ತರಕ್ಕೆ ಬೆಳೆಯಬೇಕು, ಇದರಿಂದಾಗಿ ರಾಜ್ಯದ ಬೇರೆ ಸೌಹಾರ್ದ ಸಹಕಾರಿಗಳಿಗೆ ಮಾದರಿಯಾಗಬೇಕು, ಸೌಹಾರ್ದ ಸಹಕಾರಿ ಕ್ಷೇತ್ರ ಕಾರ್ಯನಿರ್ವಹಣೆ ಉತ್ತಮತ್ವದಿಂದ ಅತ್ಯುತ್ತಮತ್ವದ ಕಡೆಗೆ ಹೆಜ್ಜೆ ಇಡುವಂತಾಗಬೇಕು, ಸಾಧನೆಯ ಹಾದಿಯಲ್ಲಿ ಪ್ರತಿ ಹೆಜ್ಜೆ ಮಹತ್ವದ್ದಾಗಿದೆ ಎಂದು ಸಂಯುಕ್ತ ಸಹಕಾರಿಯ ಉಪಾಧ್ಯಕ್ಷರಾದ ಶ್ರೀ ಹೆಚ್.ವಿ.ರಾಜೀವರವರು ದಿನಾಂಕ 8 ಮೇ 2015ರಂದು ಈ ತರಬೇತಿಯನ್ನು ಉದ್ಘಾಟಿಸಿ, ನಡೆಯುವವನು ಎಡವುವನಲ್ಲದೆ ಕುಳಿತವನು ಎಡವುವುದಿಲ್ಲ ಎಂದರು.

ಪ್ರಪಂಚದಲ್ಲಿ ಎಲ್ಲಬಲ್ಲವರು ಯಾರೂ ಇರುವುದಿಲ್ಲ. ತಪ್ಪು ಮಾಡುವುದು ಸಹಜ, ತಪ್ಪುಗಳನ್ನು ತಿದ್ದಿಕೊಂಡು ನಡೆಯುವವನು ಜಾಣ. ಅನುಭವದಿಂದಲೇ ವಿಷಯಗಳು ತಿಳಿಯುತ್ತವೆ. ಸೌಹಾರ್ದ ಸಹಕಾರಿಗಳು ಉತ್ತಮ ಗುಣಮಟ್ಟ ಹೊಂದಿವೆ, ಉತ್ತಮ ಹೆಸರು ಮಾಡಿವೆ. ಸಹಕಾರಿ ಕ್ಷೇತ್ರಕ್ಕೆ ಹೊಸ ನಾಯಕತ್ವವನ್ನು ನೀಡಿವೆ. ನಮ್ಮ ಎಲ್ಲಾ ಕಾರ್ಯಗಳನ್ನು ಸಾರ್ವಜನಿಕರು ಗಮನಿಸುತ್ತಾರೆ. ಎಚ್ಚರಿಕೆಯಿಂದ ಸ್ವಯಂ ನಿಯಂತ್ರಣದಿಂದ ಕಾರ್ಯನಿರ್ವಹಿಸಿ, ಈ ಕ್ಷೇತ್ರದ ಗುಣಮಟ್ಟವನ್ನು ಹೆಚ್ಚಿಸಿ ಎಂದು ಹೇಳಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದ ಸಂಯುಕ್ತ ಸಹಕಾರಿಯ ಮಾಜಿ ಅಧ್ಯಕ್ಷರಾದ ಶ್ರೀ ಎಸ್. ಆರ್. ಸತೀಶ್‌ಚಂದ್ರರವರು ಮಾತನಾಡಿ ಇಡೀ ದೇಶದಲ್ಲಿ 6 ಲಕ್ಷ ಸಹಕಾರಿ ಸಂಸ್ಥೆಗಳಿವೆ. ಕರ್ನಾಟಕದಲ್ಲಿ 36000 ಸಹಕಾರಿ ಸಂಸ್ಥೆಗಳಿವೆ. ಸೌಹಾರ್ದ ಸಹಕಾರಿ ಕ್ಷೇತ್ರದಲ್ಲಿ 3200 ಸಹಕಾರಿ ಸಂಸ್ಥೆಗಳಿವೆ. ಅದರಲ್ಲಿ ಸಂಯುಕ್ತ ಸಹಕಾರಿಯ ನಿರ್ದೇಶಕರು ಪ್ರತಿನಿಧಿಸುತ್ತಿರುವ ಸೌಹಾರ್ದ ಸಹಕಾರಿಗಳ ಸಂಖ್ಯೆ 32. ಈ ಸಂಸ್ಥೆಗಳಲ್ಲಿ ವೃತ್ತಿಪರತೆ, ಪಾರದರ್ಶಕತೆ, ಆಧುನಿಕತೆ, ವೈವಿಧ್ಯಮಯ ಚಟುವಟಿಕೆಗಳು, ತಂತ್ರಜ್ಞಾನದ ಅಳವಡಿಕೆ, 100 ವರ್ಷಗಳ ಇತಿಹಾಸವಿರುವ ಸಹಕಾರಿ ಸಂಸ್ಥೆಗಳಿಗಿಂತ ವೇಗದ ಪ್ರಗತಿ, ಇ–ಸ್ಟ್ಯಾಂಪಿಂಗ್ ಸೇವೆ ಸೇರಿದಂತೆ ವಿಭಿನ್ನ ಚಟುವಟಿಕೆಗಳು ರಾಜ್ಯದಲ್ಲಿ ಸೌಹಾರ್ದ ಸಹಕಾರಿಗಳಿಗೆ ಹೆಮ್ಮೆಯ ವಿಷಯವಾಗಿದೆ. ಇವುಗಳನ್ನು ಉಳಿಸಿಕೊಂಡು, ಬೆಳೆಸಿಕೊಂಡು, ತಪ್ಪುಗಳಾಗದಂತೆ ಎಚ್ಚರಿಕೆಯಿಂದ ಕಾರ್ಯನಿರ್ವಹಿಸುವತ್ತ ನಮ್ಮ ನಡೆಯಾಗಬೇಕಿದೆ. ಸಾಧನೆಗೆ ಮಿತಿಯಿಲ್ಲ. ಅವಕಾಶಗಳ ಸದುಪಯೋಗ ಅಗತ್ಯ. ಈ ತರಬೇತಿ ಒಂದು ಉತ್ತಮ ಸಂಪ್ರದಾಯವನ್ನು ಸಾರುತ್ತಿದೆ ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿದ್ದ ಶ್ರೀ ಜಿ.ಎನ್.ಪಾಟೀಲ್‌ರವರು ಮಾತನಾಡಿ ಸಹಕಾರಿಗಳ ಅಳಿವು ಉಳಿವು ಸಹಕಾರಿಗಳ ಮುಖ್ಯಕಾರ್ಯನಿರ್ವಾಹಕರ ಮೇಲೆ ಅವಲಂಬಿಸಿದೆ. ಮುಖ್ಯಕಾರ್ಯನಿರ್ವಾಹಕರು ಪ್ರಾಮಾಣಿಕರಾಗಿ, ದಕ್ಷತೆಯಿಂದ, ಶಿಸ್ತು ಅಳವಡಿಸಿಕೊಂಡು, ಜವಾಬ್ದಾರಿಯುತವಾಗಿ ಕಾರ್ಯನಿರ್ವಹಿಸುವುದು ಅಗತ್ಯ ಎಂದು ತಿಳಿಸಿದರು. ಪ್ರಾಂತೀಯ ಸಹಕಾರ ನಿರ್ವಹಣಾ ಸಂಸ್ಥೆಯ ಪ್ರಾಧ್ಯಾಪಕರಾದ ಶ್ರೀ ಗಣೇಶನ್‌ರವರು ಉಪಸ್ಥಿತರಿದ್ದರು. ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ.ಪಾಟೀಲ್‌ರವರು ಪ್ರಾಸ್ತಾವಿಕವಾಗಿ ಮಾತನಾಡಿದರು. ಸಹಪ್ರಧಾನ ವ್ಯವಸ್ಥಾಪಕರಾದ ಶ್ರೀ ರಘುನಂದನ್‌ರವರು ಸ್ವಾಗತಿಸಿದರು. ಸೌಹಾರ್ದ ಅಭಿವೃದ್ಧಿ ಅಧಿಕಾರಿ ಶ್ರೀ ಶಶಿಕುಮಾರರವರು ವಂದನಾರ್ಪಣೆ ಸಲ್ಲಿಸಿದರು. ■

## ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾಲಯದಲ್ಲಿ "ಯುವಕರು ಹಾಗೂ ಸಹಕಾರ" ಸಂವಾದ ಕಾರ್ಯಕ್ರಮ

## ಸಹಕಾರ ಅಧ್ಯಯನ ಪೀಠ, ಸಹಕಾರ ಡಿಪ್ಲೋಮಾ ಪ್ರಾರಂಭಿಸಲು ಆಸಕ್ತಿ - ಡಾ. ಟಿ.ಆರ್.ಸುಬ್ರಮಣ್ಯ, ಕುಲಪತಿಗಳು



"ಯುವಕರು ಹಾಗೂ ಸಹಕಾರ" ಸಂವಾದ ಕಾರ್ಯಕ್ರಮದ ಉದ್ಘಾಟನೆ

**14 ಮೇ 2015, ಹುಬ್ಬಳ್ಳಿ :** ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ನೇತೃತ್ವದಲ್ಲಿ ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾಲಯದ ಸಹಯೋಗದೊಂದಿಗೆ "ಯುವಕರು ಹಾಗೂ ಸಹಕಾರ" ಕುರಿತಾದ ಸಂವಾದ ಕಾರ್ಯಕ್ರಮವನ್ನು 14 ಮೇ 2015ರಂದು ವಿಶ್ವವಿದ್ಯಾಲಯದ ಸಭಾಂಗಣದಲ್ಲಿ ಏರ್ಪಡಿಸಲಾಗಿತ್ತು.

ಕಾರ್ಯಕ್ರಮವನ್ನು ಉದ್ಘಾಟಿಸಿದ ಕುಲಪತಿಗಳಾದ ಡಾ. ಟಿ.ಆರ್. ಸುಬ್ರಮಣ್ಯರವರು ಮಾತನಾಡಿ ಕಾನೂನು ವಿಶ್ವವಿದ್ಯಾಲಯ ಜೊತೆಗೂಡಿ ಯುವಕರನ್ನು ಸಹಕಾರಿ ಕ್ಷೇತ್ರದೆಡೆಗೆ ಬರಮಾಡಿಕೊಳ್ಳುವ ಕಾರ್ಯಕ್ರಮ ಅತ್ಯಂತ ಮಹತ್ವದ್ದಾಗಿದೆ. ಸಹಕಾರ ಕ್ಷೇತ್ರದ ಬಳಕೆ ಪ್ರತಿಯೊಬ್ಬರ ಜೀವನದಲ್ಲಿ ಒಂದಿಲ್ಲೊಂದು ವಿಧವಾಗಿ ಬಂದೇಬರುತ್ತದೆ.

ಆ ಸಂದರ್ಭದಲ್ಲಿ ಸಹಕಾರ ಕ್ಷೇತ್ರದ ಬಗ್ಗೆ ಪ್ರಾಥಮಿಕ ಮಾಹಿತಿಯಾದರೂ ಇರುವುದು ಅವಶ್ಯಕ. ಅದರಲ್ಲೂ ಕಾನೂನು ವಿದ್ಯಾರ್ಥಿಗಳಿಗೆ ಇದು ಹಲವು ವಿಧವಾಗಿ ಉಪಯೋಗವಾಗುತ್ತದೆ. ಆದ್ದರಿಂದ ಇದೊಂದು ಉತ್ತಮ ಕಾರ್ಯಕ್ರಮ ಎಂದು ತಿಳಿಸಿ, ಈ ನಿಟ್ಟಿನಲ್ಲಿ ವಿಶ್ವವಿದ್ಯಾಲಯದಲ್ಲಿಯೂ ಸಹ ಸಹಕಾರ ಕುರಿತು ಅಧ್ಯಯನ ಪೀಠ ಸ್ಥಾಪಿಸುವ, ಸಹಕಾರ ಕ್ಷೇತ್ರಕ್ಕೆ ಸಂಬಂಧಿಸಿದ ದತ್ತಿ ಉಪನ್ಯಾಸ ವ್ಯವಸ್ಥೆಯನ್ನು ಪ್ರತಿವರ್ಷ ನಡೆಸುವ ಹಾಗೂ ಸಹಕಾರ ಡಿಪ್ಲೋಮಾ ಪ್ರಾರಂಭಿಸುವ ಬಗ್ಗೆ ಒಲವನ್ನು ವ್ಯಕ್ತಪಡಿಸಿದರು ಮತ್ತು ಈ ಬಗ್ಗೆ ಮುಂದಿನ ಕ್ರಿಯಾ ಯೋಜನೆ ಸಿದ್ಧಪಡಿಸಿ ಕ್ರಮವಿಡುವಂತೆ ವಿಶ್ವವಿದ್ಯಾಲಯದ ಅಧಿಕಾರಿಗಳಿಗೆ ಹಾಗೂ ಸಂಯುಕ್ತ ಸಹಕಾರಿಗೆ ತಿಳಿಸಿದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ಅಧ್ಯಕ್ಷರಾದ ಶ್ರೀ ಗುರುನಾಥ ಜಾಂತಿಕರರವರು ವಹಿಸಿ ಮಾತನಾಡುತ್ತ ಯುವಕರು ಈ ದೇಶದ ಪ್ರಗತಿಯ ಆಶಾಕಿರಣ, ದೇಶದ ಅಭಿವೃದ್ಧಿ ಅವರಿಂದಲೇ ಸಾಧ್ಯ. ವಿಶ್ವದಲ್ಲಿ ಅತಿ ಹೆಚ್ಚು ಯುವಕರನ್ನು ಹೊಂದಿರುವ ರಾಷ್ಟ್ರ ನಮ್ಮ ಭಾರತ. ಈ ಯುವಶಕ್ತಿಗೆ ಸರಿಯಾದ ಶಿಕ್ಷಣ, ತರಬೇತಿ ಹಾಗೂ ಮಾರ್ಗದರ್ಶನಗಳ ಅವಶ್ಯಕತೆ ಇದೆ. ಈ ನಿಟ್ಟಿನಲ್ಲಿ ಯುವಕರನ್ನು ಸಹಕಾರಿ ಕ್ಷೇತ್ರದೆಡೆಗೆ ಬರಮಾಡಿಕೊಳ್ಳುವ ದೃಷ್ಟಿಯಿಂದ ಸಂಯುಕ್ತ ಸಹಕಾರಿ ಈ ಪ್ರಯತ್ನ ನಡೆಸುತ್ತಿದೆ. ಆರ್ಥಿಕವಾಗಿ ಹಾಗೂ ಸಾಮಾಜಿಕವಾಗಿ ಬೆಳೆಯಲು ಸಹಕಾರಿ ಕ್ಷೇತ್ರ ಅತ್ಯಂತ ಉತ್ತಮವಾಗಿದೆ.

ಈ ಕ್ಷೇತ್ರದ ಕಾರ್ಯಚಟುವಟಿಕೆಗಳ ಬಗ್ಗೆ ಯುವಕರಲ್ಲಿ ಜ್ಞಾನ ಮೂಡಿಸುವ ಕಾರ್ಯ ಇದಾಗಿದೆ ಎಂದು ತಿಳಿಸಿದರು. ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಡಾ.ಬಿ.ಎಸ್.ರೆಡ್ಡಿ, ಕುಲಸಚಿವರು, ಮೌಲ್ಯಮಾಪನ, ಶ್ರೀ ನೀಲಕಂಠ ಅಸೂಟಿ, ಅಧ್ಯಕ್ಷರು, ಹಾಲು ಉತ್ಪಾದಕರ ಒಕ್ಕೂಟ, ಧಾರವಾಡ, ಶ್ರೀ ಬಾಪೂಗೌಡ ಪಾಟೀಲ್, ಅಧ್ಯಕ್ಷರು, ಜಿಲ್ಲಾ ಸಹಕಾರ ಯೂನಿಯನ್, ಧಾರವಾಡ ಮಾತನಾಡಿ ಇದೊಂದು ಒಳ್ಳೆಯ ಕಾರ್ಯ ಎಂದು ತಿಳಿಸಿದರು. ಸಂಯುಕ್ತ ಸಹಕಾರಿಯ ನಿರ್ದೇಶಕರುಗಳಾದ ಶ್ರೀ ಎಂ.ಬಿ.ಕಲಾಲ, ಹಾವೇರಿ, ಶ್ರೀ ಆರ್.ಎನ್.ದೇಶಪಾಂಡೆ, ಗದಗ, ಶ್ರೀ ರವಿ ಯಲಿಗಾರ, ಧಾರವಾಡ ಇವರುಗಳು ಉಪಸ್ಥಿತರಿದ್ದರು.

ಡಾ.ಎಸ್.ಎ.ಸಿದ್ಧಾಂತಿಯವರು ಸಹಕಾರ ಕ್ಷೇತ್ರದ ಪ್ರಚಲಿತ ವಿಷಯಗಳು ಸಹಕಾರ ಕ್ಷೇತ್ರದಲ್ಲಿ ಯುವಕರ ಪಾತ್ರ ವಿಷಯದ ಬಗ್ಗೆ ಉಪನ್ಯಾಸ ನೀಡಿದರು. ನಂತರ ನಡೆದ ಸಂವಾದ ಕಾರ್ಯಕ್ರಮದಲ್ಲಿ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಜಿ.ಬಿ.ಪಾಟೀಲ, ಸಹಪ್ರಾಧ್ಯಾಪಕರು, ಕಾನೂನು ವಿಶ್ವವಿದ್ಯಾಲಯ, ಶ್ರೀ ಅನೂಪ ದೇಶಪಾಂಡೆ, ವಕೀಲರು ಹಾಗೂ ಸಿಂಡಿಕೇಟ್ ಸದಸ್ಯರು, ರಾಜ್ಯ ಕಾನೂನು ವಿಶ್ವವಿದ್ಯಾಲಯ, ಶ್ರೀ ಎಸ್.ವಿ.ನಾಯಕ, ಜನರಲ್ ಮ್ಯಾನೇಜರ್, ಕೆ.ಸಿ.ಸಿ.ಬ್ಯಾಂಕ್, ಧಾರವಾಡ, ಶ್ರೀ ರಂಗಸ್ವಾಮಿ, ಸಹಕಾರ ಸಂಘಗಳ ಲೆಕ್ಕಪರಿಶೋಧನಾ ಉಪನಿರ್ದೇಶಕರು, ಶ್ರೀ ಸುರೇಶ ನಾಯಕ, ಹಾಲು ಉತ್ಪಾದಕರ ಒಕ್ಕೂಟ ಹಾಗೂ ಸಹಕಾರ ಸಂಘಗಳ ಸಹಾಯಕ ನಿಬಂಧಕರು, ಧಾರವಾಡ ಇವರುಗಳು



ಭಾಗವಹಿಸಿದ್ದರು. ಸಂಯುಕ್ತ ಸಹಕಾರಿಯ ಅಧ್ಯಕ್ಷರಾದ ಶ್ರೀ ಗುರುನಾಥ ಜಾಂತಿಕರ ಅಧ್ಯಕ್ಷತೆ ವಹಿಸಿದ್ದರು. ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀ ಭಾಸ್ಕರ ಹೆಗಡೆ ಕಾಗೇರಿಯವರು ಸಂವಾದಕಾರರಾಗಿ ಕಾರ್ಯನಿರ್ವಹಿಸಿದರು.

ಸಂಯುಕ್ತ ಸಹಕಾರಿಯ ಅಧ್ಯಕ್ಷರಾದ ಶ್ರೀ ಗುರುನಾಥ ಜಾಂತಿಕರ್ ರವರು ಅಧ್ಯಕ್ಷತೆ ವಹಿಸಿದ್ದರು ಹಾಗೂ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ.ಪಾಟೀಲ್‌ರವರು ಕಾನೂನು ವಿಶ್ವವಿದ್ಯಾಲಯದ ಡೀನ್ ಹಾಗೂ ನಿರ್ದೇಶಕರಿಗೆ ಸಂಯುಕ್ತ ಸಹಕಾರಿಯ ಪರವಾಗಿ ನೆನಪಿನ ಕಾಣಿಕೆಯನ್ನು ನೀಡಿ ಗೌರವಿಸಿದರು. ಸಂವಾದ ಕಾರ್ಯಕ್ರಮದಲ್ಲಿ ವಿಶ್ವವಿದ್ಯಾಲಯದ 125ಕ್ಕೂ ಹೆಚ್ಚು ವಿದ್ಯಾರ್ಥಿಗಳು, ಧಾರವಾಡ ಜಿಲ್ಲೆಯ ಸೌಹಾರ್ದ ಸಹಕಾರಿಗಳ ಪ್ರತಿನಿಧಿಗಳು ಭಾಗವಹಿಸಿದ್ದರು.

## "ಇ-ಸ್ಟಾಂಪಿಂಗ್" ಕೇಂದ್ರಗಳನ್ನು ನಡೆಸುತ್ತಿರುವ ಸೌಹಾರ್ದ ಸಹಕಾರಿಗಳ ಸಿಬ್ಬಂದಿಯವರಿಗೆ ತರಬೇತಿ

ಇ-ಸ್ಟಾಂಪಿಂಗ್ ತರಬೇತಿಯಲ್ಲಿ ಜಿಲ್ಲಾ ನೋಂದಣಾಧಿಕಾರಿಗಳಿಂದ ಸಿಬ್ಬಂದಿಗಳಿಗೆ ಇ-ಸ್ಟಾಂಪಿಂಗ್ ಆರ್ಟಿಕಲ್ಸ್‌ಗಳ ಬಗ್ಗೆ ಮಾಹಿತಿ ಮತ್ತು ಇ-ಸ್ಟಾಂಪ್ ಕಾಗದವನ್ನು ರದ್ದುಗೊಳಿಸಿ ಹಣ ಹಿಂಪಡೆಯುವ ಕ್ರಮಗಳ ಬಗ್ಗೆ ಮಾಹಿತಿ, ಸ್ಟಾಕ್ ಹೋಲ್ಡಿಂಗ್ ಕಾರ್ಪೋರೇಷನ್ ಆಫ್ ಇಂಡಿಯಾ ಲಿ., ಅಧಿಕಾರಿಗಳಿಂದ ಸ್ಟಾಕ್ ಹೋಲ್ಡಿಂಗ್ ಕಾರ್ಪೋರೇಷನ್‌ನ ಕಾರ್ಯಗಳು ಮತ್ತು ಇ-ಸ್ಟಾಂಪಿಂಗ್ ಬಗ್ಗೆ ಸರ್ಕಾರ ಹಾಗೂ ಹೆಚ್‌ಎಸ್‌ಸಿಐಎಲ್ ತೆಗೆದುಕೊಂಡಿರುವ ಕ್ರಮಗಳ ಬಗ್ಗೆ ಹಾಗೂ ಹೆಚ್‌ಪಿ ಕಂಪನಿಯವರು ಪ್ರಿಂಟರ್, ಕಾರ್ಟ್ರೇಡ್ಜ್ ಮತ್ತು ಗಣಕಯಂತ್ರದ ತಂತ್ರಾಂಶಗಳ ಬಗ್ಗೆ ಮಾಹಿತಿ ನೀಡಿದರು. ನಂತರದ ಅವಧಿಯಲ್ಲಿ ಸಂಯುಕ್ತ ಸಹಕಾರಿಯ ಇ-ಸ್ಟಾಂಪಿಂಗ್ ವಿಭಾಗದ ಅಧಿಕಾರಿಗಳು ಇ-ಸ್ಟಾಂಪಿಂಗ್ ವಿಭಾಗದ ಕಾರ್ಯಚಟುವಟಿಕೆಗಳ ಬಗ್ಗೆ ಮಾಹಿತಿಗಳನ್ನು ನೀಡಲಾಯಿತು.

| ದಿನಾಂಕ | ಸ್ಥಳ | ಭಾಗವಹಿಸಿದ ಜಿಲ್ಲೆಗಳು | ಭಾಗವಹಿಸಿದ | |
|---|---|---|---|---|
| | | | ಎ.ಸಿ.ಸಿ. ಕೇಂದ್ರಗಳು | ಪ್ರತಿನಿಧಿಗಳು |
| 18 ಮೇ 2015 | ಪ್ರಾದೇಶಿಕ ಸಹಕಾರ ಆಡಳಿತ ನಿರ್ವಹಣಾ ತರಬೇತಿ ಕೇಂದ್ರ, ಪದ್ಮನಾಭನಗರ, ಬನಶಂಕರಿ 2ನೇ ಹಂತ, ಬೆಂಗಳೂರು. | ಬೆಂಗಳೂರು ಜಿಲ್ಲೆ | 31 | 45 |
| 19 ಮೇ 2015 | | ಬೆಂಗಳೂರು ಗ್ರಾಮಾಂತರ, ರಾಮನಗರ, ಚಿಕ್ಕಬಳ್ಳಾಪುರ, ತುಮಕೂರು ಹಾಗೂ ಕೋಲಾರ ಜಿಲ್ಲೆಗಳು | 30 | 43 |
| 20 ಮೇ 2015 | ಜಿಲ್ಲಾ ಕೋ-ಆಪರೇಟಿವ್ ಸಭಾ ಭವನ, ಚಾಮರಾಜ ಡಬಲ್ ರೋಡ್, ಮೈಸೂರು. | ಮೈಸೂರು, ಮಂಡ್ಯ, ಹಾಸನ ಹಾಗೂ ಮಡಿಕೇರಿ ಜಿಲ್ಲೆಗಳು | 21 | 25 |
| 26 ಮೇ 2015 | ಕರ್ನಾಟಕ ಛೇಂಬರ್ ಆಫ್ ಕಾಮರ್ಸ್ ಅಂಡ್ ಇಂಡಸ್ಟ್ರಿ, ಜಿ.ಸಿ.ನಗರ, ಹುಬ್ಬಳ್ಳಿ. | ಧಾರವಾಡ, ಗದಗ ಹಾಗೂ ಹಾವೇರಿ ಜಿಲ್ಲೆಗಳು | 37 | 50 |
| 27 ಮೇ 2015 | ಹೋಟೆಲ್ ಪಂಚವಟಿ, ಯಲ್ಲಾಪುರ ರೋಡ್, ಶಿರಸಿ. | ಉತ್ತರ ಕನ್ನಡ ಜಿಲ್ಲೆ | 29 | 34 |
| 28 ಮೇ 2015 | ಡಿಸಿಸಿ ಬ್ಯಾಂಕ್, ಬಾಲಾಜಿ ರಸ್ತೆ, ಶಿವಮೊಗ್ಗ. | ಶಿವಮೊಗ್ಗ, ಚಿತ್ರದುರ್ಗ, ದಾವಣಗೆರೆ ಹಾಗೂ ಚಿಕ್ಕಮಗಳೂರು ಜಿಲ್ಲೆಗಳು | 47 | 70 |

### ಶೇ.14 ಸೇವಾ ತೆರಿಗೆ ಜೂನ್ 1 ರಿಂದ ಜಾರಿಗೆ

ಕೇಂದ್ರ ಆಯವ್ಯಯ 2015-16ರಲ್ಲಿ ಸೇವಾ ತೆರಿಗೆಯನ್ನು ಶೇ.12ರಿಂದ ಶೇ.14ರಷ್ಟು ಏರಿಕೆ ಮಾಡಲಾಗುವುದು ಎಂದು ಘೋಷಿಸಲಾಗಿತ್ತು. ಆದರೆ ಸಂಸತ್ತಿನಲ್ಲಿ ಹಣಕಾಸು ಮಸೂದೆ ಅಂಗೀಕಾರವಾಗಿರದ ಹಿನ್ನೆಲೆಯಲ್ಲಿ ಇದು ಏಪ್ರಿಲ್ 01, 2015ರಿಂದ ಜಾರಿಗೆ ಬಂದಿರಲಿಲ್ಲ. ಪ್ರಸ್ತುತ, ಜೂನ್ 01, 2015ರಿಂದ ಬಜೆಟ್‌ನಲ್ಲಿ ಘೋಷಿಸಿದ್ದಂತೆ ಶೇ.14 ಸೇವಾ ತೆರಿಗೆ ಜಾರಿಗೆ ಬರಲಿದೆ ಎಂದು ಹಣಕಾಸು ಸಚಿವಾಲಯವು ಪ್ರಕಟಣೆಯಲ್ಲಿ ತಿಳಿಸಿದೆ.

### ಮುಂಬರುವ ಕಾರ್ಯಕ್ರಮಗಳು

- ರಾಜ್ಯದ ಸೌಹಾರ್ದ ಸಹಕಾರಿಗಳ ಸಿಬ್ಬಂದಿಯವರಿಗಾಗಿ 13ನೇ ತಂಡದ 10 ದಿನಗಳ ವ್ಯಕ್ತಿತ್ವ ವಿಕಸನ ವಿಶೇಷ ತರಬೇತಿ ಕಾರ್ಯಕ್ರಮವನ್ನು ದಿನಾಂಕ 11 ಜೂನ್ 2015 ರಿಂದ 20 ಜೂನ್ 2015ರವರೆಗೆ ಚಂದ್ರವನ ಆಶ್ರಮ, ಪಶ್ಚಿಮವಾಹಿನಿ ಹಿಂಭಾಗ, ಶ್ರೀರಂಗಪಟ್ಟಣ ತಾಲೂಕು, ಮಂಡ್ಯ ಜಿಲ್ಲೆಯಲ್ಲಿ ಏರ್ಪಡಿಸಲಾಗಿದೆ.
- ಉಡುಪಿ ಹಾಗೂ ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿ ಇ-ಸ್ಟ್ಯಾಂಪಿಂಗ್ ಕೇಂದ್ರಗಳನ್ನು ನಡೆಸುತ್ತಿರುವ ಸೌಹಾರ್ದ ಸಹಕಾರಿಗಳ ಯೂಸರ್ ಮತ್ತು ಸೂಪರ್‌ವೈಸರ್‌ಗಳಿಗಾಗಿ "ಇ-ಸ್ಟ್ಯಾಂಪಿಂಗ್ ತರಬೇತಿ ಕಾರ್ಯಕ್ರಮ"ವನ್ನು ದಿನಾಂಕ 12 ಜೂನ್ 2015ರಂದು ಕ್ಯಾಂಪ್ಕೋ ಲಿಮಿಟೆಡ್, ವಾರಣಾಸಿ ಟವರ್ಸ್, ಮಿಷನ್ ರೋಡ್, ಮಂಗಳೂರು - 575001 ಇಲ್ಲಿ ಏರ್ಪಡಿಸಲಾಗಿದೆ.

# ಪಟ್ಟಣ ಸೌಹಾರ್ದ ಸಹಕಾರಿ ಬ್ಯಾಂಕುಗಳ ಮುಖ್ಯಕಾರ್ಯನಿರ್ವಾಹಕರಿಗೆ ಹಾಗೂ ಹಿರಿಯ ಅಧಿಕಾರಿಗಳಿಗಾಗಿ ಕಾರ್ಯಕ್ಷಮತೆ ಅಭಿವೃದ್ಧಿ ಶಿಬಿರ

## ಸೌಹಾರ್ದ ಸಹಕಾರಿ ಬ್ಯಾಂಕುಗಳ ಕಾರ್ಯ ಚಟುವಟಿಕೆ ಹಾಗೂ ಸಾಧನೆ ತೃಪ್ತಿಕರ - ಗುರುನಾಥ ಜಾಂತಿಕರ



ಉದ್ಘಾಟನೆ

**15, 16 ಮೇ 2015, ಬೀದರ್ :** ರಾಜ್ಯದ ಸೌಹಾರ್ದ ಸಹಕಾರಿ ಕ್ಷೇತ್ರದ ವ್ಯಾಪ್ತಿಯಲ್ಲಿರುವ 18 ಸೌಹಾರ್ದ ಸಹಕಾರಿ ಬ್ಯಾಂಕುಗಳ ಮುಖ್ಯಕಾರ್ಯನಿರ್ವಾಹಕರಿಗೆ ಹಾಗೂ ಹಿರಿಯ ಅಧಿಕಾರಿಗಳಿಗಾಗಿ 2 ದಿನಗಳ ಕಾರ್ಯಕ್ಷಮತೆ ಅಭಿವೃದ್ಧಿ ಶಿಬಿರವನ್ನು 15,16 ಮೇ 2015ರಂದು ಬೀದರ್‌ನಲ್ಲಿರುವ ಬ್ಲ್ಯಾಕ್ ಬಕ್ ಜಂಗಲ್ ರೆಸಾರ್ಟ್‌ನಲ್ಲಿ ಏರ್ಪಡಿಸಲಾಗಿತ್ತು.

ಕಾರ್ಯಕ್ರಮದ ಉದ್ಘಾಟನೆಯನ್ನು ಸಂಯುಕ್ತ ಸಹಕಾರಿಯ ಅಧ್ಯಕ್ಷರಾದ ಶ್ರೀ ಗುರುನಾಥ ಜಾಂತಿಕರರವರು ನೆರವೇರಿಸಿ ರಾಜ್ಯದ ಸೌಹಾರ್ದ ಸಹಕಾರಿ ವ್ಯಾಪ್ತಿಯಲ್ಲಿರುವ 18 ಸಹಕಾರಿ ಬ್ಯಾಂಕುಗಳು ಪ್ರಸಕ್ತ ಮುಕ್ತ ಮಾರುಕಟ್ಟೆಯ ಪೈಪೋಟಿಯನ್ನು ಸಮರ್ಪಕವಾಗಿ ಎದುರಿಸಿ ಯಾವುದೇ ವಾಣಿಜ್ಯ ಬ್ಯಾಂಕುಗಳಿಗೆ ಕಡಿಮೆ ಇಲ್ಲವೆಂಬಂತೆ ಗ್ರಾಹಕರಿಗೆ ಉತ್ತಮವಾಗಿ ಸೇವೆ ಸಲ್ಲಿಸುತ್ತ ಹೊಸ ಹೊಸ ಯೋಜನೆಗಳ ಅನುಷ್ಠಾನಗೊಳಿಸುತ್ತ ಉತ್ತಮವಾಗಿ ಕಾರ್ಯನಿರ್ವಹಿಸುತ್ತಿವೆ. ಸೌಹಾರ್ದ ಸಹಕಾರಿ ಕ್ಷೇತ್ರದಿಂದ ಸಹಕಾರಿ ಕ್ಷೇತ್ರಕ್ಕೆ ಇದೊಂದು ಕೊಡುಗೆ ಎಂದು ಹೇಳಿದರೆ ಅತಿಶಯೋಕ್ತಿಯಾಗಲಾರದು ಎಂದು ತಿಳಿಸಿದರು. ರಾಜ್ಯದ ಸೌಹಾರ್ದ ಸಹಕಾರಿ ಕ್ಷೇತ್ರ ಕಳೆದ 15 ವರ್ಷಗಳಲ್ಲಿ ನಿರಂತವಾಗಿ ಸಮಸ್ಯೆಗಳನ್ನು ಎದುರಿಸುತ್ತಲೇ ಬಂದಿದೆ. ಸಂಯುಕ್ತ ಸಹಕಾರಿಯ ಆಡಳಿತ ಮಂಡಲಿ ಈ ಸಮಸ್ಯೆಗಳನ್ನು ಸಮರ್ಥ ರೀತಿಯಲ್ಲಿ ನಿರ್ವಹಿಸುತ್ತ ಬಂದಿದೆ. ಈಗಲೂ ಸಹ ದಿನ ನಿತ್ಯದ ಕಾರ್ಯಾಚರಣೆಯಲ್ಲಿ ಅನೇಕ ಸಮಸ್ಯೆಗಳಿವೆ. ಈ ಕ್ಷೇತ್ರದ ಬೆಳವಣಿಗೆಗಾಗಿ ಸಂಯುಕ್ತ ಸಹಕಾರಿ ನಿರಂತರವಾಗಿ ಹೋರಾಟವನ್ನು ಮುಂದುವರೆಸಲಿದೆ ಎಂದು ತಿಳಿಸಿದರು.

ಮುಖ್ಯ ಅತಿಥಿಗಳಾಗಿ ಆಗಮಿಸಿದ ಬೀದರ್ ಜಿಲ್ಲೆಯ ಸಹಕಾರಿ ಸಂಘಗಳ ಉಪನಿಬಂಧಕ ಶ್ರೀ ವಿಶ್ವನಾಥ ಮಲಕೋಡರವರು ಮಾತನಾಡಿ ರಾಜ್ಯದ ಸೌಹಾರ್ದ ಸಹಕಾರಿ ಸಂಸ್ಥೆಗಳ ಬೆಳವಣಿಗೆ ಹಾಗೂ ಕಾರ್ಯಾಚರಣೆ ಉತ್ತಮವಾಗಿದೆ ಎಂದು ತಿಳಿಸಿದರು.

ಶ್ರೀ ಕ್ಷೇತ್ರ ಗೊರಟಾದ ಸ್ವಾಮೀಜಿ ಡಾ.ರಾಜಶೇಖರರವರು ಸಾನಿಧ್ಯವನ್ನು ವಹಿಸಿ ಆಶೀರ್ವಚನ ನೀಡಿದರು. ಸಹಕಾರಿ ಸಂಸ್ಥೆಗಳು ಸದಸ್ಯರ ಆರ್ಥಿಕ ಹಾಗೂ ಸಾಮಾಜಿಕ ಅಭಿವೃದ್ಧಿಯಲ್ಲಿ ಮಹತ್ವ ಪಾತ್ರವನ್ನು ನಿರ್ವಹಿಸುತ್ತವೆ. ಈ ಸಹಕಾರಿ ವ್ಯವಸ್ಥೆ ಸಾರ್ವಜನಿಕರ ಬದುಕಿನಲ್ಲಿ ಆರ್ಥಿಕ ಅಭಿವೃದ್ಧಿಯ ಸಾಧನವಾಗಿ ಊರುಗೋಲಾಗಿ ಕಾರ್ಯನಿರ್ವಹಿಸುವಂತಾಗಬೇಕಾದರೆ ಮುಖ್ಯ ಕಾರ್ಯನಿರ್ವಾಹಕರಿಗೆ ಹಾಗೂ ಹಿರಿಯ ಅಧಿಕಾರಿಗಳಿಗೆ ಏರ್ಪಡಿಸಿರುವ ಈ ಕಾರ್ಯಕ್ಷಮತೆ ತರಬೇತಿ ಅವಶ್ಯಕ ಎಂದು ತಿಳಿಸಿದರು. ಸಂಯುಕ್ತ ಸಹಕಾರಿಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ.ಜಿ.ಪಾಟೀಲ್‌ರವರು ಸ್ವಾಗತ ಹಾಗೂ ಪ್ರಾಸ್ತಾವಿಕ ಮಾತುಗಳನ್ನು ಹೇಳಿದರು.

ಸಂಪನ್ಮೂಲ ವ್ಯಕ್ತಿಗಳಾಗಿ ಭಾಗವಹಿಸಿದ ಶ್ರೀ ರಮೇಶ ಹೆಗಡೆಯವರು ಸಂಪತ್ತು ನಿರ್ವಹಣೆ (ವೆಲ್ತ್ ಮ್ಯಾನೇಜ್‌ಮೆಂಟ್), ಶ್ರೀ ಕೃಷ್ಣಮೂರ್ತಿಯವರು ವಿವಿಧ ತೆರಿಗೆಗಳು ಹಾಗೂ ರಿಟರ್ನ್‌ಗಳನ್ನು ಫೈಲ್ ಮಾಡುವ ಬಗ್ಗೆ ತಿಳಿಸಿದರು. ಸಂವಾದ ರೂಪಕವಾಗಿ ಏರ್ಪಡಿಸಿದ್ದ ಅಧಿವೇಶನದಲ್ಲಿ ರಿಸರ್ವ್ ಬ್ಯಾಂಕಿನವರು ಪರಿವೀಕ್ಷಣೆ ಸಂದರ್ಭದಲ್ಲಿ ಇತ್ತೀಚೆಗೆ ಗಮನಿಸುತ್ತಿರುವ ವಿಷಯಗಳ ಬಗ್ಗೆ ಚರ್ಚೆ ನಡೆಯಿತು. ಕೆಲವು ವಿಷಯಗಳು ಪಟ್ಟಣ ಸಹಕಾರ ಬ್ಯಾಂಕುಗಳ ಅಭಿವೃದ್ಧಿಗೆ ಮುನ್ನಡೆಗೆ ಅವಕಾಶವಾಗುತ್ತಿಲ್ಲ. ಈ ಧೋರಣೆಯಲ್ಲಿ ಬದಲಾವಣೆ ಅವಶ್ಯಕ ಈ ಬಗ್ಗೆ ಸಂಯುಕ್ತ ಸಹಕಾರಿಯವರು ರಿಸರ್ವ ಬ್ಯಾಂಕ್‌ನವರೊಂದಿಗೆ ವ್ಯವಹರಿಸಬೇಕು ಎಂದು ತಿಳಿಸಿದರು. ಸಂಯುಕ್ತ ಸಹಕಾರಿಯ ಬೆಳಗಾವಿ ವಿಭಾಗಾಧಿಕಾರಿ ಶ್ರೀ ಜಿ.ಎಸ್. ಟೋಪಣ್ಣವರ ಸಹಕಾರಿಗಳ ಪರಿವೀಕ್ಷಣೆ ಕುರಿತು ಮಾರ್ಗದರ್ಶನ ಮಾಡಿದರು. ವಿವಿಧ ಸೌಹಾರ್ದ ಸಹಕಾರಿ ಬ್ಯಾಂಕುಗಳ ಮುಖ್ಯಕಾರ್ಯನಿರ್ವಾಹಕರು ತಮ್ಮ ಬ್ಯಾಂಕುಗಳ ಪ್ರಗತಿಯನ್ನು, ವಿಶೇಷ ಚಟುವಟಿಕೆಗಳನ್ನು ವಿವರಿಸಿದರು. ಕಾರ್ಯಕ್ರಮ ಉತ್ತಮವಾಗಿತ್ತೆಂದು ಪ್ರತಿನಿಧಿಗಳು ಅಭಿಪ್ರಾಯ ವ್ಯಕ್ತಪಡಿಸಿದರು. ■

## ಸೌಹಾರ್ದ ಸಹಕಾರಿಗಳ ನಿರ್ದೇಶಕರುಗಳಿಗೆ ಎರಡು ದಿನಗಳ ಆಡಳಿತ ಪರಿಣಿತಿ ತರಬೇತಿ

# ಸೌಹಾರ್ದ ಸಹಕಾರಿ ಕ್ಷೇತ್ರದ ಬೆಳವಣಿಗೆಗೆ ಸರಕಾರದ ಅಗತ್ಯ ಪ್ರೋತ್ಸಾಹ – ದಿನೇಶ್ ಗುಂಡೂರಾವ್



ಸನ್ಮಾನ

**21, 22 ಮೇ 2015, ಬೆಂಗಳೂರು** : ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ನೇತೃತ್ವದಲ್ಲಿ ರಾಜ್ಯದ ಸೌಹಾರ್ದ ಸಹಕಾರಿಗಳ ನಿರ್ದೇಶಕರುಗಳಿಗಾಗಿ ಪ್ರಾಂತೀಯ ಸಹಕಾರ ಆಡಳಿತ ನಿರ್ವಹಣಾ ಸಂಸ್ಥೆಯಲ್ಲಿ ಏರ್ಪಡಿಸಿದ್ದ 2 ದಿನಗಳ ತರಬೇತಿ ಕಾರ್ಯಕ್ರಮವನ್ನು ಕರ್ನಾಟಕ ಸರಕಾರದ ಆಹಾರ ಮತ್ತು ನಾಗರಿಕ ಸರಬರಾಜು ವ್ಯವಸ್ಥೆಗಳ ಸಚಿವರಾದ ಶ್ರೀ ದಿನೇಶ್ ಗುಂಡೂರಾವ್‌ರವರು ಉದ್ಘಾಟಿಸಿ ಸಹಕಾರ ಕ್ಷೇತ್ರಕ್ಕೆ ಒಂದು ಶತಮಾನದ ಇತಿಹಾಸವಿದೆ, ಸಹಕಾರ ಕ್ಷೇತ್ರದಿಂದ ಉತ್ತಮ ಸಾಧನೆ ಹಾಗೂ ಆರ್ಥಿಕ ಹಾಗೂ ಸಾಮಾಜಿಕ ಪ್ರಗತಿಯನ್ನು ಈ ದೇಶ ಕಂಡಿದೆ. ಸೌಹಾರ್ದ ಸಹಕಾರಿ ಸಂಸ್ಥೆಗಳೂ ಕೂಡ ಉತ್ತಮವಾಗಿ ಕಾರ್ಯನಿರ್ವಹಿಸುತ್ತಿರುವುದನ್ನು ಸರಕಾರ ಗಮನಿಸಿದೆ.

ವಿಶೇಷವಾಗಿ "ಇ"ಸ್ಟ್ಯಾಂಪಿಂಗ್ ಕ್ಷೇತ್ರದಲ್ಲಿ ಸೌಹಾರ್ದ ಸಹಕಾರಿಗಳು ಮುಂಚೂಣಿಯಲ್ಲಿರುವುದು ಅಭಿನಂದನೀಯ. ನಮ್ಮ ಆಹಾರ ಹಾಗೂ ನಾಗರೀಕ ಸರಬರಾಜು ವ್ಯವಸ್ಥೆಯಲ್ಲೂ ಕೂಡ ಸೌಹಾರ್ದ ಸಹಕಾರಿ ಸಂಸ್ಥೆಗಳು ಕಾರ್ಯನಿರ್ವಹಿಸುವ ಬಗ್ಗೆ ಅವಕಾಶಗಳನ್ನು ಪರಿಶೀಲಿಸಲಾಗುವುದು ಎಂದು ತಿಳಿಸಿದರು. ರಾಜ್ಯದಲ್ಲಿ ಸೌಹಾರ್ದ ಸಹಕಾರಿ ಸಂಸ್ಥೆಗಳ ಬೆಳವಣಿಗೆಗೆ ಸರಕಾರ ಅಗತ್ಯ ಪ್ರೋತ್ಸಾಹ ನೀಡುವುದಕ್ಕೆ ಬದ್ಧವಾಗಿದೆ ಎಂದು ತಿಳಿಸಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದ ಸಂಯುಕ್ತ ಸಹಕಾರಿಯ ಅಧ್ಯಕ್ಷರಾದ ಶ್ರೀ ಗುರುನಾಥ ಜಾಂತಿಕರರವರು ರಾಜ್ಯದಲ್ಲಿ ಸಹಕಾರ ಕ್ಷೇತ್ರದ ಪುನರ್‌ಸಂಘಟಿಸುವ ಕೇಂದ್ರ ಯೋಜನಾ ಆಯೋಗದ ವರದಿ ಆಧಾರಿತವಾಗಿ ಸೌಹಾರ್ದ ಸಹಕಾರಿ ಕಾಯ್ದೆ ಜಾರಿಗೆ ಬಂದು 15 ವರ್ಷಗಳು ಕಳೆದಿವೆ. ಸೌಹಾರ್ದ ಸಹಕಾರಿ ಕ್ಷೇತ್ರದ ಬೆಳವಣಿಗೆ ಉತ್ತಮವಾಗಿದೆ. ಇದುವರೆಗೆ 3200ಕ್ಕೂ ಹೆಚ್ಚು ಸೌಹಾರ್ದ ಸಹಕಾರಿಗಳು ಹಾಗೂ 18 ಸೌಹಾರ್ದ ಸಹಕಾರಿ ಬ್ಯಾಂಕುಗಳು ಉತ್ತಮವಾಗಿ ಕಾರ್ಯನಿರ್ವಹಿಸುತ್ತಿವೆ. ಈ ಕ್ಷೇತ್ರದ ಸುಲಭ ಕಾರ್ಯಾಚರಣೆಯಲ್ಲಿ ಸೌಹಾರ್ದ ಸಹಕಾರಿ ಕಾಯ್ದೆಯ ಇತ್ತೀಚಿನ ಕೆಲವು ತಿದ್ದುಪಡಿಗಳು ಅನಗತ್ಯ ಗೊಂದಲ ನಿರ್ಮಾಣ ಮಾಡಿವೆ. ಅವುಗಳ ನಿವಾರಣೆಗೆ ಕ್ರಮ ಅಗತ್ಯ ಎಂದು ತಿಳಿಸಿದರಲ್ಲದೇ ಸೌಹಾರ್ದ ಸಹಕಾರಿಗಳು ಯಶಸ್ವಿಯಾಗಿ "ಇ"ಸ್ಟ್ಯಾಂಪಿಂಗ್ ಕಾರ್ಯವನ್ನು ನಿರ್ವಹಿಸುತ್ತಿರುವ ಮಾದರಿಯಲ್ಲಿ ಆಹಾರ ಮತ್ತು ನಾಗರೀಕ ಸರಬರಾಜು ಇಲಾಖೆಯ ಸಾರ್ವಜನಿಕ ಸೇವಾ ಕಾರ್ಯಚಟುವಟಿಕೆಗಳನ್ನು ಸೌಹಾರ್ದ ಸಹಕಾರಿಗಳಿಗೆ ವಹಿಸಿಕೊಡಬೇಕೆಂದು ತಿಳಿಸಿ ಸಂಯುಕ್ತ ಸಹಕಾರಿಯ ಪರವಾಗಿ ಹಾಗೂ ರಾಜ್ಯದ ಸಮಸ್ತ ಸೌಹಾರ್ದ ಸಹಕಾರಿಗಳ ಪರವಾಗಿ ಮನವಿ ಪತ್ರವನ್ನು ಸಲ್ಲಿಸಿದರು.

ಸಂಯುಕ್ತ ಸಹಕಾರಿಯ ಉಪಾಧ್ಯಕ್ಷರಾದ ಶ್ರೀ ಹೆಚ್.ವಿ.ರಾಜೀವರವರು ವಂದನಾರ್ಪಣೆ ಸಲ್ಲಿಸಿದರು. ಪ್ರಾರಂಭದಲ್ಲಿ ಸಂಯುಕ್ತ ಸಹಕಾರಿಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ. ಪಾಟೀಲ್‌ರವರು ಅತಿಥಿ ಗಣ್ಯರನ್ನು ಸ್ವಾಗತಿಸಿ, ಕಾರ್ಯಕ್ರಮದ ಬಗ್ಗೆ ಪ್ರಾಸ್ತಾವಿಕವಾಗಿ ಮಾತನಾಡಿದರು.

ಕಾರ್ಯಕ್ರಮದಲ್ಲಿ ನಿವೃತ್ತ ಅಪರ ನಿಬಂಧಕರಾದ ಶ್ರೀ ಸಿ.ಎನ್.ಪರಶಿವಮೂರ್ತಿ, ಡಾ. ಎಸ್.ಎ.ಸಿದ್ಧಾಂತಿ, ಶ್ರೀ ವೈ.ವಿ.ಗುಂಡೂರಾವ್, ಡಾ. ನಂದೀಶ ಹಿರೇಮಠ ಹಾಗೂ ಶ್ರೀ ಬಿ.ಎ.ಮಹದೇವಪ್ಪ ಇವರುಗಳು ವಿವಿಧ ವಿಷಯಗಳ ಬಗ್ಗೆ ಉಪನ್ಯಾಸ ನೀಡಿದರು. ತರಬೇತಿ ಕಾರ್ಯಕ್ರಮದಲ್ಲಿ ರಾಜ್ಯದ 15 ಜಿಲ್ಲೆಗಳ 40 ಸೌಹಾರ್ದ ಸಹಕಾರಿಗಳಿಂದ 66 ಸಹಕಾರಿಗಳು ಭಾಗವಹಿಸಿ ಪ್ರಯೋಜನ ಪಡೆದರು.



ಮನವಿ ಸಲ್ಲಿಕೆ

# ಜೂನ್ 5 ವಿಶ್ವ ಪರಿಸರ ದಿನ

ಶುದ್ಧ ಗಾಳಿ, ಪರಿಶುದ್ಧ ನೀರು, ಉತ್ತಮ ಹಸಿರು ಪರಿಸರ, ನಿರ್ಮಲ ವಾತಾವರಣ, ಇದು ಭಗವಂತನ ಸೃಷ್ಟಿ. ಇದನ್ನು ಪ್ರಕೃತಿಯು ನಮಗೆ ಕೊಡುಗೆಯಾಗಿ ನೀಡಿದೆ. ಉತ್ತಮ ಆರೋಗ್ಯಕ್ಕೆ, ಮಾನಸಿಕ ಸ್ವಾಸ್ಥ್ಯತೆಗೆ ಇದು ಅವಶ್ಯಕ. ಇದನ್ನೇ ಎಲ್ಲರೂ ಅಪೇಕ್ಷಿಸುವುದು ವಿಶ್ವದ ಎಲ್ಲಾ ದೇಶಗಳು ಪರಿಸರ ಸಂರಕ್ಷಣೆಗೆ ಹಲವಾರು ಕಾರ್ಯಕ್ರಮಗಳನ್ನು ಹಮ್ಮಿಕೊಂಡಿವೆ. ನಮ್ಮ ದೇಶದ ಪ್ರಧಾನ ಮಂತ್ರಿಗಳು ಸ್ವಚ್ಛಭಾರತ ನಿರ್ಮಾಣ ಅಭಿಯಾನವನ್ನೇ ಪ್ರಾರಂಭಿಸಿದ್ದಾರೆ. ಸ್ವತಃ ತಾವೂ ಸಹ ಪೊರಕೆ ಹಿಡಿದು ಸ್ವಚ್ಛ ಭಾರತ ಅಭಿಯಾನಕ್ಕೆ ಚಾಲನೆ ನೀಡಿದ್ದಾರೆ. ಇದು ಸ್ವಾಗತಾರ್ಹ ಹಾಗೂ ಅಭಿನಂದನೀಯ. ಪರಿಸರ ಸಂರಕ್ಷಣೆ ಯಾರ ಹೊಣೆ ಇದು ಪ್ರಶ್ನೆಯಲ್ಲ. ಇದು ನಮ್ಮೆಲ್ಲರ ಹೊಣೆ ಎಂಬುದು ನಿರ್ವಿವಾದ. ಪರಿಸರ ಸಂರಕ್ಷಣೆ ಎಲ್ಲಿಂದ ಪ್ರಾರಂಭಿಸಬೇಕು? ಎಂಬುದು ಪ್ರಶ್ನೆ, ಯಾರು ಪ್ರಾರಂಭಿಸಬೇಕು? ಹೇಗೆ ಪ್ರಾರಂಭಿಸಬೇಕು? ಇವುಗಳು ಕಾಲಹರಣ ಮಾಡುವ ಮತ್ತು ಜವಾಬ್ದಾರಿಯನ್ನು ಇತರರಿಗೆ ಹೊರಿಸುವ ಕರ್ತವ್ಯ ಪ್ರಜ್ಞೆ ಇರದ ಜನರು ಹೇಳುವ ಮಾತು. ಇದು ನಿತ್ಯದ ನಿರಂತರ ಕೆಲಸ. ಎಲ್ಲರೂ ಮಾಡಬೇಕಾದ ಪ್ರಥಮ ಕೆಲಸ. ಈ ಬಗ್ಗೆ ಕರ್ತವ್ಯ ಪ್ರಜ್ಞೆಯನ್ನು ಬೆಳಸಿಕೊಳ್ಳಬೇಕಾದುದು ಇಂದಿನ ಅಗತ್ಯತೆ. ಈ ಕರ್ತವ್ಯ ಪ್ರಜ್ಞೆಯನ್ನು ಜಾಗೃತಿಗೊಳಿಸುವ ನಿಟ್ಟಿನಲ್ಲಿ 5ಜೂನ್ 2015ನ್ನು ವಿಶ್ವ ಪರಿಸರ ದಿನವನ್ನಾಗಿ ಆಚರಿಸಲಾಗಿದೆ.

ಪರಿಸರ ಸಂರಕ್ಷಣೆ ಕೇವಲ ಭೌತಿಕ ಪರಿಸರ ಸಂರಕ್ಷಣೆಗೆ ಸೀಮಿತವಾಗುವುದಿಲ್ಲ. ಕೇವಲ ಸ್ವಚ್ಛತೆಯೊಂದೇ ಪರಿಸರ ಸಂರಕ್ಷಣೆಯಲ್ಲ. ಮಾನಸಿಕ ಸ್ವಾಸ್ಥ್ಯ ಬೆಳವಣಿಗೆಗೆ ಉತ್ತಮ ಪರಿಸರದ ಕೊಡುಗೆ ಅಪಾರವಾಗಿದೆ. ವಿಚಾರ ಮಾಲಿನ್ಯ, ಆಚಾರ ಮಾಲಿನ್ಯ, ಸಾಂಸ್ಕೃತಿಕ ಮಾಲಿನ್ಯ, ಶಬ್ಧ ಮಾಲಿನ್ಯ, ದೃಶ್ಯ ಮಾಲಿನ್ಯ, ಸ್ಪರ್ಶ ಮಾಲಿನ್ಯ, ಸಾಮಾಜಿಕ ಪರಿಸರಮಾಲಿನ್ಯ, ಶೈಕ್ಷಣಿಕ ಮಾಲಿನ್ಯ, ಆರೋಗ್ಯ ಮಾಲಿನ್ಯ ಮುಂತಾದವುಗಳು



ಅತ್ಯಂತ ಮಹತ್ವದ ಪಾತ್ರವನ್ನು ನಿರ್ವಹಿಸುತ್ತವೆ. ಇವೆಲ್ಲವುಗಳ ಉತ್ತಮ ನಿರ್ವಹಣೆ ಪ್ರತಿಯೊಬ್ಬರ ಜವಾಬ್ದಾರಿ ಎಂಬುದನ್ನು ನಾವೆಲ್ಲರೂ ಅರಿತುಕೊಳ್ಳುವುದು ಅಗತ್ಯ.

ಪರಿಸರ ಸಂರಕ್ಷಣೆಯಲ್ಲಿ ಮೊದಲು ನಾನು, ನಾವು, ನಮ್ಮ ಕುಟುಂಬ, ನಾವು ಕೆಲಸ ಮಾಡುವ ಕಛೇರಿ, ಸಹಕಾರಿ ಸಂಸ್ಥೆ/ ಬ್ಯಾಂಕ್/ ಕಾರ್ಖಾನೆ ಇತ್ಯಾದಿ, ನಮ್ಮ ಸಮಾಜ, ನಮ್ಮ ಊರು, ನಗರ, ರಾಜ್ಯ, ದೇಶ ಹೀಗೆ ಎಲ್ಲಾ ಹಂತಗಳಲ್ಲಿ ನಮ್ಮ ಜವಾಬ್ದಾರಿ ಇದೆ ಎಂಬುದನ್ನು ನಾವುಗಳು ಗಮನಿಸಬೇಕು.

ಪರಿಸರ ಸಂರಕ್ಷಣೆಯಲ್ಲಿ ಸಹಕಾರಿಗಳು ಹಿಂದೆ ಬೀಳಬಾರದು. "ಸ್ವಚ್ಛಭಾರತಕ್ಕಾಗಿ ಸಹಕಾರಿಗಳು" ಎಂಬುದನ್ನು ಕಾರ್ಯಗತಗೊಳಿಸಲು ಹತ್ತು ಹಲವು ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಪರಿಸರ ಸಂರಕ್ಷಣೆಯಲ್ಲಿ ಸಹಕಾರಿಗಳು ಮೊದಲಿಗರು ಎಂಬುದನ್ನು ಸಮಾಜ ಒಪ್ಪುವ ಹಾಗೆ ಭೇಷ್ ಎನ್ನುವ ಹಾಗೇ ಕಾರ್ಯನಿರ್ವಹಣೆ ಅಗತ್ಯ.

# ಜೂನ್ 21 ವಿಶ್ವ ಯೋಗ ದಿನ

21 ಜೂನ್ 2015ರಂದು ಅಂತರರಾಷ್ಟ್ರೀಯ ಯೋಗ ದಿನಾಚರಣೆಯನ್ನಾಗಿ ಆಚರಿಸುವುದಕ್ಕೆ ವಿಶ್ವ ಸಂಸ್ಥೆಯವರು ಕರೆಕೊಟ್ಟಿರುವುದು ಸ್ವಾಗತಾರ್ಹ. ಯೋಗಕ್ಕೆ ಅಂತರರಾಷ್ಟ್ರೀಯ ಮಾನ್ಯತೆ ನೀಡಿ ಭಾರತದ ಸಂಸ್ಕೃತಿಯನ್ನು ಮಾನ್ಯತೆ ಮಾಡಿರುವುದಕ್ಕೆ ವಿಶ್ವಸಂಸ್ಥೆಗೆ ಈ ದೇಶದ ಸಮಸ್ತ ಜನತೆಯು ಅಭಿನಂದಿಸುತ್ತದೆ. ಆರೋಗ್ಯವೇ ಭಾಗ್ಯ, ಮಾನಸಿಕ ನೆಮ್ಮದಿಯೇ ಸಂತೋಷದ ದಾರಿ ಎಂಬುದನ್ನು ನಮ್ಮ ಸನಾತನ ಸಂಸ್ಕೃತಿ, ನಮ್ಮ ಋಷಿಮುನಿಗಳು, ನಮ್ಮ ಹಿರಿಯರು 5000 ವರ್ಷಗಳ ಹಿಂದೆಯೇ ನಮಗೆ ತೋರಿಸಿದ ಅತ್ಯಂತ ಮಹತ್ವದ ದಾರಿ. ಯೋಗ ಒಂದು ಉತ್ತಮ ಜೀವನದ ಕಲೆ. ಯೋಗ ಅಭ್ಯಾಸ ಮಾಡುವವರಿಂದ ಕಾಯಿಲೆಗಳು ದೂರವಿರುತ್ತವೆಯಲ್ಲದೇ ಮಾನಸಿಕ ಸ್ವಾಸ್ಥವನ್ನು ಹೊಂದಲು ಸಾಧ್ಯವಾಗುತ್ತದೆ. ನೆಮ್ಮದಿಯ ಜೀವನ ನಡೆಸಲು ಸಹಾಯವಾಗುತ್ತದೆ. ಪ್ರಸಕ್ತ ವಿಶ್ವದಲ್ಲಿ ತನ್ನ ತನವನ್ನು ಸ್ಥಾಪಿಸಲು ಮುಂದಾಗುತ್ತಿರುವ ದೇಶಗಳ, ಜಾತಿ ಜನಾಂಗಗಳ ವ್ಯವಸ್ಥೆ, ವಿಶ್ವದ ಆರ್ಥಿಕ ಏರುಪೇರುಗಳನ್ನು ಎದುರಿಸಲು ಸಾಧ್ಯವಾಗದೇ ಮುಂದುವರೆದ ಹಾಗೂ ಮುಂದುವರೆಯುತ್ತಿರುವ ಮತ್ತು ಹಿಂದುಳಿದ ದೇಶಗಳ ಬಾಂಧವ್ಯದಲ್ಲಿ ವಾಸ್ತವವಾಗಿ ಅಂತರ ಹೆಚ್ಚುತ್ತಿದೆ. ಆರ್ಥಿಕ ಅಸಮಾನತೆಯ ಜೊತೆಗೆ, ಆಹಾರ ಆರೋಗ್ಯಗಳ ಜೀವನ ವಿಧಾನಗಳಲ್ಲಿ ಅಸಮಾನತೆ ಹೆಚ್ಚುತ್ತಿದೆ. ವಿಶ್ವದ ಕೆಲವೇ ಜನರು ಇಡೀ ವಿಶ್ವವನ್ನಾಳುವ ಪರಿಸ್ಥಿತಿ ಬಂದಿದೆ. ಹರಡುತ್ತಿರುವ ವಿವಿಧ ಹೊಸ ರೀತಿಯ ರೋಗರುಜಿನಗಳು ಜನತೆಯನ್ನು ನರಳುವಂತೆ ಮಾಡುತ್ತಿವೆ. ವೈಜ್ಞಾನಿಕ ಆವಿಷ್ಕಾರಗಳು ಬಡವರ ಪಾಲಿಗೆ ಇಲ್ಲವಾಗುತ್ತಿವೆ. ಶಾಂತಿ ಕದಡಿದೆ. ವಿಶ್ವದ ಜನತೆಗೆ ಶಾಂತಿಯನ್ನರಸುತ್ತಿದ್ದಾರೆ. ಪ್ರಾಪಂಚಿಕ ಜಂಜಾಟದಲ್ಲಿ ಶಾಂತಿ ಕಾಣುತ್ತಿಲ್ಲ. ಇದಕ್ಕೆಲ್ಲ ಅಗತ್ಯವಾಗಿರುವುದು ಮಾನಸಿಕ ನೆಮ್ಮದಿ. ಈ ಮಾನಸಿಕ ನೆಮ್ಮದಿಯನ್ನು ತಂದುಕೊಡುವ ಶಕ್ತಿ ಇರುವುದು ಯೋಗಕ್ಕೆ ಮಾತ್ರ. ಯೋಗವೆಂದರೆ ಮನಸ್ಸನ್ನು ಕೇಂದ್ರೀಕರಿಸುವುದು. ಆಧ್ಯಾತ್ಮಿಕ ಬೌದ್ಧಿಕ ಧೀಶಕ್ತಿಯನ್ನು ಚೇತನಗೊಳಿಸುವುದು. ನಮ್ಮ ಒಳಗೆ ಅಡಗಿರುವ ಸಹಜ ಶಕ್ತಿಯನ್ನು ಪ್ರಕಟಿಸುವುದು. ಯೋಗ ತತ್ವಜ್ಞಾನದಿಂದ ದೇಹವು ಮತ್ತು ಬುದ್ಧಿಯು ಚುರುಕಾಗುತ್ತದೆ. ಯೋಗವು ನಮ್ಮನ್ನು ವಿಕಾಸದತ್ತ ಅಧ್ಯಾತ್ಮಿಕತೆಯತ್ತ ಕೊಂಡೊಯ್ಯುತ್ತದೆ. ಮನಸ್ಸಿನ ವೃತ್ತಿಗಳನ್ನು ನಿರೋಧಿಸುತ್ತದೆ. ಮನಸ್ಸು ಆಲೋಚನೆಗೊಳಗಾಗುವ ಸ್ಥಿತಿಗೆ ವೃತ್ತಿ ಎಂದು ಕರೆಯುತ್ತಾರೆ. ವೃತ್ತಿಗಳಲ್ಲಿ 5 ವಿಭಾಗಗಳು. ಪ್ರಾಪಂಚಿಕ ವಿಷಯಗಳ ಬಗ್ಗೆ ಆಲೋಚಿಸುವುದು, ಏನೂ ತಿಳಿಯದಂತಿರುವುದು, ವ್ಯಸನ ಮತ್ತು ಧ್ಯಾನಗಳ ನಡುವೆ ಓಡಾಡುವುದು, ಯಾವುದರಲ್ಲಿಯೂ ಏಕಾಗ್ರತೆ ಬಾರದಿರುವುದು ಇವೆಲ್ಲ ಸ್ಥಿತಿಗಳಿಗೂ ಭಿನ್ನವಾದವೊಂದು ವೃತ್ತಿ. ಮನಸ್ಸನ್ನು ಪೂರ್ಣ ಹತೋಟಿಯಲ್ಲಿಡುವುದೇ ನಿರುದ್ಧ ಸ್ಥಿತಿ. ಮನಸ್ಸಿನ ವೃತ್ತಿಗಳನ್ನು ದಾಟಿ ಸಮಾಧಿ ಸ್ಥಿತಿ ತಲುಪುವುದೇ ಮೋಕ್ಷ. ಮಾನವತ್ವದಿಂದ ದೈವತ್ವಕ್ಕೆ ಹೋಗುವುದೇ ಯೋಗ. ಪಾರಂಪರಾಗತವಾಗಿ ಬಂದ ಈ ಪ್ರಾಚೀನ ಯೋಗವಿದ್ಯೆಯನ್ನು ಪತಂಜಲಿ ಮಹರ್ಷಿಗಳು 185 ಸೂತ್ರಗಳಲ್ಲಿ ಪಾತಂಜಲಿ ಯೋಗಸೂತ್ರವೆಂದು ರಚಿಸಿ ವಿಶ್ವಕ್ಕೆ ಮಹದುಪಕಾರ ಮಾಡಿ ಪ್ರಾತಸ್ಮರಣೀಯರಾಗಿದ್ದಾರೆ.

ಈ ಹಿನ್ನೆಲೆಯಲ್ಲಿ ನಮ್ಮ ದೇಶದ ಈ ಯೋಗಶಾಸ್ತ್ರವನ್ನು ವಿಶ್ವದವರೆಲ್ಲ ಅಧ್ಯಯನ ಮಾಡುವಂತೆ ಅನುಷ್ಠಾನಗೊಳಿಸಲು, ಅಳವಡಿಸಲು ಸಾಧ್ಯವಾಗುವಂತೆ ವ್ಯಾಪಕ ಪ್ರಚಾರದ ಅವಶ್ಯಕತೆಯನ್ನು ಪರಿಗಣಿಸಿ ವಿಶ್ವ ಸಂಸ್ಥೆಯವರ ನಿರ್ಣಯ ಸ್ವಾಗತಾರ್ಹ ಹಾಗೂ ಅಭಿನಂದನೀಯ. ರಾಜ್ಯದ ಸೌಹಾರ್ದ ಸಹಕಾರಿಗಳು, ಎಲ್ಲಾ ಸಹಕಾರಿ ಬಂಧುಗಳು ಈ ಕಾರ್ಯದಲ್ಲಿ ಮುಂದಾಗಬೇಕು. ಸಂಯುಕ್ತ ಸಹಕಾರಿಯು ಹಮ್ಮಿಕೊಳ್ಳುತ್ತಿರುವ ಅಲ್ಪಾವಧಿಯ ಎಲ್ಲಾ ತರಬೇತಿ ಕಾರ್ಯಕ್ರಮಗಳಲ್ಲಿ ಯೋಗಶಿಕ್ಷಣವನ್ನು ಅಳವಡಿಸಿರುವುದು ತಮ್ಮ ಗಮನದಲ್ಲಿರಲಿ. ಹಾಗೆಯೇ ನಿಮ್ಮ ವ್ಯಾಪ್ತಿಯಲ್ಲಿ ಯೋಗದ ಬಗ್ಗೆ ತರಬೇತಿ ಶಿಬಿರಗಳನ್ನು ನಡೆಸಿ, ಜೊತೆಗೆ ಯೋಗ ಶಿಕ್ಷಣವನ್ನು ಪರಿಚಯಿಸುವ ಕರಪತ್ರಗಳನ್ನು, ಪುಸ್ತಿಕೆಗಳನ್ನು ಪ್ರಕಟಿಸಿ ಮಾನವ ಸಂಕುಲದ ಆರೋಗ್ಯಕರ ಜೀವನ ಶೈಲಿಯನ್ನು ರೂಪಿಸುವಲ್ಲಿ ಈ ಅಭಿಯಾನದಲ್ಲಿ ಭಾಗಿಯಾಗಬೇಕು. ಸಾಮಾಜಿಕ ಕಳಕಳಿ ಎಂಬ ಸಹಕಾರ ತತ್ವದ ಅನುಷ್ಠಾನಕ್ಕೆ ಬದ್ಧತೆಯನ್ನು ಪ್ರದರ್ಶಿಸಬೇಕು ಎಂಬುದು ಸಂಯುಕ್ತ ಸಹಕಾರಿಯ ಅಪೇಕ್ಷೆ.



– ಗುರುನಾಥ ಜಾಂತಿಕರ

### ಸಂಯುಕ್ತ ಸಹಕಾರಿಯ ಅಧ್ಯಕ್ಷ ಶ್ರೀ ಗುರುನಾಥ ಜ್ಯಾಂತಿಕರ ಅವರಿಂದ ಸಿಬಿಡಿಟಿ (ಕೇಂದ್ರ ನೇರ ತೆರಿಗೆ ಮಂಡಳಿ, ನವದೆಹಲಿ) ಅಧ್ಯಕ್ಷರ ಭೇಟಿ

## ಪತ್ತಿನ ಸಹಕಾರ ಸಂಘಗಳಿಗೆ ಹಾಗೂ ಸೌಹಾರ್ದ ಸಹಕಾರಿಗಳಿಗೆ ಆದಾಯ ತೆರಿಗೆ ಅಧಿಕಾರಿಗಳಿಂದ ಬರುತ್ತಿರುವ ನೋಟೀಸ್‌ಗಳ ಕಿರುಕುಳ ನಿವಾರಿಸಲು ಕ್ರಮ – ಶ್ರೀಮತಿ ಅನಿತಾ ಕಪೂರ

ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ಅಧ್ಯಕ್ಷರಾದ ಶ್ರೀ ಗುರುನಾಥ ಜಾಂತಿಕರ್ ರವರು ರಾಜ್ಯದ ಹಿರಿಯ ಸಂಸದ, ರಾಜ್ಯಸಭಾ ಸದಸ್ಯರಾದ ಶ್ರೀ ಬಸವರಾಜ ಪಾಟೀಲ್ ಸೇಡಂ ಇವರ ನೇತೃತ್ವದಲ್ಲಿ ಕೇಂದ್ರ ನೇರ ತೆರಿಗೆ ಮಂಡಳಿ ಅಧ್ಯಕ್ಷರಾದ ಶ್ರೀಮತಿ ಅನಿತಾ ಕಪೂರರವರನ್ನು ನವದೆಹಲಿಯ ಅವರ ಕಛೇರಿಯಲ್ಲಿ ಭೇಟಿ ಮಾಡಿ ಪತ್ತಿನ ಸಹಕಾರ ಸಂಘಗಳು ಹಾಗೂ ಸೌಹಾರ್ದ ಸಹಕಾರಿಗಳು ಆದಾಯ ತೆರಿಗೆ ಕಾನೂನಿನ 80ಪಿ(2)(ಎ)(i) ವ್ಯಾಪ್ತಿಯಲ್ಲಿ ಬರುವುದಿಲ್ಲವಾದರೂ ಆದಾಯ ತೆರಿಗೆ ಅಧಿಕಾರಿಗಳು ನೋಟೀಸ್ ನೀಡುವುದು, ಸಹಕಾರಿಗಳು ಹಾಗೂ ಪತ್ತಿನ ಸಹಕಾರ ಸಂಘಗಳು ಅಪೀಲ್ ಹೋಗುವುದು, ಅಪೀಲ್‌ನಲ್ಲಿ ಸಹಕಾರಿಗಳ ಪರವಾಗಿ ತೀರ್ಪು ಬರುವುದು, ನಂತರ ಇದೇ ರೀತಿಯಲ್ಲಿ ಬೇರೆ ಸಹಕಾರಿಗಳಿಗೆ



ನೋಟೀಸ್ ನೀಡುವುದು, ಅಪೀಲ್‌ನ ತೀರ್ಪು ಪ್ರತಿ ಹಾಜರುಪಡಿಸಿದಾಗ್ಯೂ ಒಪ್ಪದೇ ಇರುವುದು ಹೀಗೆ ಕಿರುಕುಳ ಆಗುತ್ತಿರುವ ಬಗ್ಗೆ ದಾಖಲೆಗಳ ಸಹಿತ ವಿವರಗಳನ್ನು ಸಿಬಿಡಿಟಿ ಅಧ್ಯಕ್ಷರ ಗಮನಕ್ಕೆ ತರಲಾಯಿತು. ಸಿಬಿಡಿಟಿ ಅಧ್ಯಕ್ಷರು ಪರಿಶೀಲಿಸಿ ಕಿರುಕುಳ ತಪ್ಪಿಸುವ ಬಗ್ಗೆ ಆದಾಯ ತೆರಿಗೆ ಇಲಾಖೆಯ ಅಧಿಕಾರಿಗಳಿಗೆ ಪತ್ರ ಬರೆಯುವುದಾಗಿ ಭರವಸೆ ನೀಡಿದರು.

80 ಪಿ (2) (ಡಿ) ಪಟ್ಟಣ ಸಹಕಾರ ಬ್ಯಾಂಕುಗಳಲ್ಲಿ ಪ್ರಾಥಮಿಕ ಸಹಕಾರಿ ಸಂಸ್ಥೆಗಳ ಠೇವಣಿಗೆ ಟಿ.ಡಿ.ಎಸ್ ಇರುವುದಿಲ್ಲ. ಆದರೆ ವಾಣಿಜ್ಯ ಬ್ಯಾಂಕುಗಳಲ್ಲಿ ಠೇವಣಿ ಮಾಡಿದರೆ ಅವರುಗಳು ಟಿ.ಡಿ.ಎಸ್ ಮಾಡುತ್ತಾರೆ. ಹೀಗಾಗಿ ಠೇವಣಿದಾರರಿಗೆ ಪ್ರಾಥಮಿಕ ಬ್ಯಾಂಕುಗಳು ಬಡ್ಡಿ ನೀಡುವಾಗ ಪ್ರಾಥಮಿಕ ಪತ್ತಿನ ಸಹಕಾರ ಸಂಘಗಳಿಗೆ ಹೊರೆಯಾಗುತ್ತದೆ. ಇದನ್ನು ತಪ್ಪಿಸುವ ಕ್ರಮ ವಿಡುವ ಬಗ್ಗೆ ವಿವರಿಸಿದರು. ಈ ವಿಷಯವನ್ನು ಪರಿಶೀಲಿಸಿ ಕ್ರಮವಿಡುವುದಾಗಿ ಶ್ರೀಮತಿ ಅನಿತಾ ಕಪೂರರವರು ತಿಳಿಸಿದರು.

ಪಿಗ್ಮಿ ಠೇವಣಿ ಸಂಗ್ರಹಕಾರರಿಗೆ ಅವರ ಕಮೀಷನ್ ಮೇಲೆ ಟಿ.ಡಿ.ಎಸ್. ಮಾಡುವಾಗ ಹಾಲಿ ಕಮೀಷನ್ ಮೊತ್ತದ ಆಧಾರದ ಮೇಲೆ ಮಾಡಲಾಗುತ್ತಿದೆ. ಇದು ಬಹಳ ಹಿಂದಿನ ದಿನಗಳಲ್ಲಿ ನಿಗದಿ ಮಾಡಲಾಗಿದೆ. ಕಮೀಷನ್ ಮೊತ್ತವನ್ನು ಹೆಚ್ಚಿಸಿ ಅದರ ಆಧಾರದ ಮೇಲೆ ಟಿ.ಡಿ.ಎಸ್ ಮಾಡಬೇಕೆಂದು ವಿನಂತಿಸಿದರು. ಈ ಬಗ್ಗೆಯೂ ಪರಿಶೀಲಿಸಿ ಕ್ರಮವಿಡುವುದಾಗಿ ಭರವಸೆ ನೀಡಿದರು.



ನವದೆಹಲಿಯ ರಾಷ್ಟ್ರೀಯ ಸಹಕಾರ ಯೂನಿಯನ್ನಿನ ಅಧ್ಯಕ್ಷರಾದ ಶ್ರೀ ಚಂದ್ರಪಾಲ್‌ಸಿಂಗ್ ಯಾದವ್ ಅವರಿಗೆ ಸಂಯುಕ್ತ ಸಹಕಾರಿ ಅಧ್ಯಕ್ಷರಾದ ಗುರುನಾಥ ಜಾಂತೀಕರ್ ಅವರು ಹೂಗುಚ್ಚ ನೀಡುತ್ತಿರುವುದು.

### ಕೇಂದ್ರದ ವಿವಿಧ ಸಂಸ್ಥೆಗಳಿಗೆ ಭೇಟಿ

ಇದೇ ಸಂದರ್ಭದಲ್ಲಿ ಸಂಯುಕ್ತ ಸಹಕಾರಿಯ ಅಧ್ಯಕ್ಷರು ಹಾಗೂ ವ್ಯವಸ್ಥಾಪಕ ನಿರ್ದೇಶಕರು ರಾಷ್ಟ್ರಮಟ್ಟದ ಸಹಕಾರ ಸಂಸ್ಥೆಗಳಾದ ರಾಷ್ಟ್ರೀಯ ಸಹಕಾರ ಯೂನಿಯನ್, ನವದೆಹಲಿ (NCUI), ರಾಷ್ಟ್ರೀಯ ಸಹಕಾರ ಅಭಿವೃದ್ಧಿ ನಿಗಮ, ನವದೆಹಲಿ (NCDC), ಕೇಂದ್ರದಲ್ಲಿ ಮಲ್ಟಿ ಕೋ–ಆಪರೇಟಿವ್ ಸೊಸೈಟಿಸ್ ಕಾಯ್ದೆಯನ್ವಯ ಕಾರ್ಯನಿರ್ವಹಿಸುತ್ತಿರುವ ಸಹಕಾರ ಸಂಘಗಳ ನಿಬಂಧಕರು, ನವದೆಹಲಿ (Central Registrar of Cooperative Societies New Delhi), ರಾಷ್ಟ್ರೀಯ ಸಹಕಾರ ತರಬೇತಿ ಮಂಡಳಿ (NCCT), ರಾಷ್ಟ್ರೀಯ ಸಹಕಾರ ಶಿಕ್ಷಣ ಕೇಂದ್ರ (NCCE)ಗಳನ್ನು ಭೇಟಿ ಮಾಡಿ ರಾಜ್ಯದ ಸೌಹಾರ್ದ ಸಹಕಾರಿಗಳ ಬೆಳವಣಿಗೆ ಹಾಗೂ ಕಾರ್ಯಚಟುವಟಿಕೆಗಳನ್ನು ವಿವರಿಸುವ ಜೊತೆಗೆ ರಾಜ್ಯದಲ್ಲಿ ಸೌಹಾರ್ದ ಸಹಕಾರಿಗಳು ಮಾಡಬಹುದಾದ ಕಾರ್ಯಕ್ರಮಗಳನ್ನು, ಚಟುವಟಿಕೆಗಳನ್ನು ವಹಿಸಿಕೊಡುವಂತೆ ವಿನಂತಿಸಿದರು.

## ರಾಜ್ಯಸಭಾ ಸದಸ್ಯರಾದ ಶ್ರೀ ಬಸವರಾಜ ಪಾಟೀಲ್ ಸೇಡಂ ಇವರಿಗೆ ರಾಜ್ಯದ ಸಹಕಾರಿಗಳ ಪರವಾಗಿ ಕೃತಜ್ಞತೆ

### ಸಹಕಾರ ಸಂಸ್ಥೆಗಳ ತೆರಿಗೆ ವಿಷಯವಾಗಿ ಕೇಂದ್ರ ಹಣಕಾಸು ಸಚಿವರಾದ ಶ್ರೀ ಅರುಣ ಜೇಟ್ಲಿಯವರಲ್ಲಿ ಶೀಘ್ರದಲ್ಲಿ ರಾಜ್ಯದ ಸಹಕಾರಿಗಳ ನಿಯೋಗ – ಗುರುನಾಥ ಜಾಂತಿಕರ

ರಾಜ್ಯದ ಸೌಹಾರ್ದ ಸಹಕಾರಿಗಳು ಹಾಗೂ ಪತ್ತಿನ ಸಹಕಾರಿಗಳು ಎದುರಿಸುತ್ತಿರುವ ತೆರಿಗೆ ಸಮಸ್ಯೆಗಳ ಬಗ್ಗೆ ಕೇಂದ್ರ ಹಣಕಾಸು ಸಚಿವರಾದ ಶ್ರೀ ಅರುಣ ಜೇಟ್ಲಿಯವರಲ್ಲಿ ರಾಜ್ಯದ ಸೌಹಾರ್ದ ಸಹಕಾರಿಗಳ ನಿಯೋಗವನ್ನು ಕೊಂಡೊಯ್ಯುವ ವ್ಯವಸ್ಥೆಯನ್ನು ಶೀಘ್ರದಲ್ಲಿ ಮಾಡುವುದಾಗಿ ಸಂಯುಕ್ತ ಸಹಕಾರಿಯ ಅಧ್ಯಕ್ಷರಾದ ಶ್ರೀ ಗುರುನಾಥ ಜಾಂತಿಕರರವರು ತಿಳಿಸಿದರು. ಕೇಂದ್ರದಲ್ಲಿ ಆಗಬೇಕಿರುವ ತೆರಿಗೆ ವಿಷಯಗಳ ಕೆಲಸಗಳ ನಿರ್ವಹಣೆಗೆ ಸಹಕಾರ ಮಾಡಿದ ರಾಜ್ಯದ ಹಿರಿಯ ಸಂಸದ ರಾಜ್ಯಸಭಾ ಸದಸ್ಯರಾದ ಶ್ರೀ ಬಸವರಾಜ ಪಾಟೀಲ್ ಶೇಡಂ ರವರಿಗೆ ರಾಜ್ಯದ ಎಲ್ಲ ಸಹಕಾರಿಗಳ ಪರವಾಗಿ ಕೃತಜ್ಞತೆಗಳನ್ನು ತಿಳಿಸುವುದರ ಜೊತೆಗೆ ಈ ನಿಯೋಗಕ್ಕೆ ಮಾನ್ಯ ಹಣಕಾಸು ಸಚಿವರೊಂದಿಗೆ ಭೇಟಿಗೆ ಅವಕಾಶವಾಗಲು ಹಾಗೂ ಸಹಕಾರಿಗಳ ಸಮಸ್ಯೆಗಳಿಗೆ ಪರಿಹಾರಕ್ಕೆ ಸಹಕಾರ ನೀಡಲು ವಿನಂತಿಸಿದ್ದಾರೆ.

## ಸಂಯುಕ್ತ ಸಹಕಾರಿ ಅಧ್ಯಕ್ಷರ ಪತ್ರಿಕಾಗೋಷ್ಠಿ



**ದಿನಾಂಕ 15 ಮೇ 2015, ಬೀದರ್ :** ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ಅಧ್ಯಕ್ಷರಾದ ಶ್ರೀ ಗುರುನಾಥ ಜಾಂತಿಕರ್‌ರವರು ಬೀದರ್‌ನಲ್ಲಿ ದಿನಾಂಕ 15 ಮೇ 2015ರಂದು ಪತ್ರಿಕಾಗೋಷ್ಠಿ ನಡೆಸಿ ರಾಜ್ಯದಲ್ಲಿ ಸೌಹಾರ್ದ ಸಹಕಾರಿ ಚಳುವಳಿ ಬೆಳವಣಿಗೆ ಉತ್ತಮವಾಗಿದೆ.

ಕಳೆದ 15 ವರ್ಷಗಳಲ್ಲಿ 3200ಕ್ಕೂ ಹೆಚ್ಚು ಸೌಹಾರ್ದ ಸಹಕಾರಿಗಳು, 777 ಇ–ಸ್ಟ್ಯಾಂಪಿಂಗ್ ಕೇಂದ್ರಗಳು, 27.5 ಲಕ್ಷ ಸದಸ್ಯರು, 475 ಕೋಟಿ ಶೇರು ಬಂಡವಾಳ, 9,500 ಕೋಟಿ ಠೇವಣಿಗಳು, 11,000 ಕೋಟಿ ದುಡಿಯುವ ಬಂಡವಾಳ, 7,000 ಕೋಟಿ ಸಾಲ ಮತ್ತು ಮುಂಗಡಗಳು, 750 ಕೋಟಿ ಮೀಸಲು ನಿಧಿಗಳು ಮತ್ತು 180 ಕೋಟಿ ಲಾಭ ಇದ್ದು, ಈ ಕ್ಷೇತ್ರದ ಮೂಲಕ 30,000 ಜನರಿಗೆ ನೇರವಾಗಿ ಹಾಗೂ 25,000 ಜನರಿಗೆ ಪರೋಕ್ಷವಾಗಿ ಉದ್ಯೋಗ ನೀಡಲಾಗಿದೆ.

ಈ ಕ್ಷೇತ್ರದ ಬೆಳವಣಿಗೆಯಲ್ಲಿ ಇತ್ತೀಚಿನ ಸೌಹಾರ್ದ ಸಹಕಾರಿ ಕಾಯ್ದೆ ತಿದ್ದುಪಡಿಯಿಂದಾಗಿ ಕೆಲವು ಆಡಳಿತಾತ್ಮಕ ತೊಂದರೆಗಳು ಉದ್ಭವಿಸುತ್ತಿದ್ದು, ಇವುಗಳನ್ನು ಸರ್ಕಾರದ ಗಮನಕ್ಕೆ ತರಲಾಗಿದೆ. ಶೀಘ್ರವೇ ಪರಿಹರಿಸಲಾಗುವುದು ಎಂದು ತಿಳಿಸಿದ್ದಾರೆ ಎಂದರು.

ಅಲ್ಲದೇ, ಸಹಕಾರ ಸಂಸ್ಥೆಗಳಿಗೆ ಆದಾಯ ತೆರಿಗೆ ಇಲಾಖೆಯಿಂದ ಆದಾಯ ತೆರಿಗೆ ವಿಷಯದಲ್ಲಿ ಸಾಕಷ್ಟು ತೊಂದರೆಗಳಿವೆ, ಇವುಗಳ ಪರಿಹಾರಕ್ಕಾಗಿ ಶೀಘ್ರದಲ್ಲಿ ಸಿಬಿಡಿಟಿ ಅಧಿಕಾರಿಗಳನ್ನು ಭೇಟಿ ಮಾಡಿ, ಈ ತೊಂದರೆಗಳ ನಿವಾರಣೆಗಾಗಿ ಪ್ರಯತ್ನಗಳು ನಡೆಯುತ್ತಿವೆ ಎಂದು ತಿಳಿಸಿದರು. ಪತ್ರಿಕಾಗೋಷ್ಠಿಯಲ್ಲಿ ಸಂಯುಕ್ತ ಸಹಕಾರಿಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ.ಪಾಟೀಲ್‌ರವರು ಉಪಸ್ಥಿತರಿದ್ದರು.

# ಸಹಕಾರಿ ಕ್ಷೇತ್ರದಿಂದ ಸಮಾಜದ ವಿಕಾಸ – ಒಡಿಯೂರುಶ್ರೀ



**ಪುತ್ತೂರು :** ಸಹಕಾರಿ ತತ್ವ ಸರ್ವವ್ಯಾಪಿಯಾದುದು. ಅದರಲ್ಲಿ ಜನರ ಜೀವನದ ಸತ್ವ ಅಡಗಿದೆ. ಆರ್ಥಿಕವಾಗಿ, ಸಾಮಾಜಿಕವಾಗಿ ಹಾಗೂ ಜನರ ಬದುಕು ರೂಪಿಸುವುದರ ಜೊತೆಗೆ ಸಮಾಜವನ್ನು ವಿಕಾಸದತ್ತ ಕೊಂಡೊಯ್ಯುತ್ತದೆ, ಸಹಕಾರಿ ಕ್ಷೇತ್ರವು ಜನರನ್ನು ಆರ್ಥಿಕವಾಗಿ ಸ್ವಾವಲಂಬಿಗಳನ್ನಾಗಿಸುತ್ತದೆ ಎಂದು ಶ್ರೀ ಕ್ಷೇತ್ರ ಒಡಿಯೂರು ಗುರುದೇವದತ್ತ ಸಂಸ್ಥಾನದ ಶ್ರೀ ಗುರುದೇವಾನಂದ ಸ್ವಾಮೀಜಿ ಹೇಳಿದರು.

ಶ್ರೀ ಸರಸ್ವತಿ ಕ್ರೆಡಿಟ್ ಸೌಹಾರ್ದ ಸಹಕಾರಿ ನಿಯಮಿತದ ವತಿಯಿಂದ ನೂತನವಾಗಿ ಪ್ರಾರಂಭವಾದ ಶ್ರೀ ಸರಸ್ವತಿ ಚಾರಿಟೇಬಲ್ ಟ್ರಸ್ಟ್‌ನ್ನು ತೆಂಕಿಲ ದರ್ಶನ್ ಕಲಾಮಂದಿರದಲ್ಲಿ ನಡೆದ ಸಮಾರಂಭದಲ್ಲಿ ಉದ್ಘಾಟಿಸಿ ಅವರು ಆಶೀರ್ವಚನ ನೀಡಿದರು.

ಅಧ್ಯಕ್ಷತೆ ವಹಿಸಿದ್ದ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ಉಪಾಧ್ಯಕ್ಷರಾದ ಶ್ರೀ ಹೆಚ್.ಎಸ್.ರಾಜೀವರವರು ಮಾತನಾಡಿ ಸೌಹಾರ್ದ ಸಹಕಾರಿ ಕ್ಷೇತ್ರವು ಸಮಾಜದಲ್ಲಿ ಆರ್ಥಿಕವಾಗಿ ಕಾರ್ಯನಿರ್ವಹಿಸುವುದರ ಜೊತೆಗೆ ಸಾಮಾಜಿಕವಾಗಿಯೂ ಹೊಸ ಮೈಲಿಗಲ್ಲನ್ನು ಆರಂಭಿಸಿದೆ. ವಿಭಿನ್ನ ಚಳುವಳಿಗಳನ್ನು ಪ್ರಾರಂಭಿಸಿ ಯುವ ಜನತೆಯನ್ನು ಸಮಾಜದ ಮುಂಚೂಣಿಗೆ ತರುವಲ್ಲಿ ಸೌಹಾರ್ದ ಸಹಕಾರಿ ಕ್ಷೇತ್ರವು ಹೊಸ ಕ್ರಾಂತಿಯನ್ನು ಆರಂಭಿಸಿದೆ ಎಂದು ಹೇಳಿದರು.

ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ನಿರ್ದೇಶಕರು ಹಾಗೂ ಸರಸ್ವತಿ ಕ್ರೆಡಿಟ್ ಸೌಹಾರ್ದ ಸಹಕಾರಿಯ ಅಧ್ಯಕ್ಷರಾದ ಶ್ರೀ ಎಸ್.ಆರ್.ಸತೀಶ್‌ಚಂದ್ರರವರು ಪ್ರಾಸ್ತಾವಿಕ ಮಾತುಗಳನ್ನಾಡುತ್ತಾ ಜಿಲ್ಲೆಯ ಪ್ರಥಮ ಸೌಹಾರ್ದ ಸಹಕಾರಿ ಸಂಸ್ಥೆಯಾಗಿ ಹುಟ್ಟಿಕೊಂಡ ಸರಸ್ವತಿ ಕ್ರೆಡಿಟ್ ಸೌಹಾರ್ದ ಸಹಕಾರಿ ಸಂಸ್ಥೆಯು ಹಲವು ಸಾಮಾಜಿಕ ಕಾರ್ಯಕ್ರಮಗಳಲ್ಲಿ ತೊಡಗಿಸಿಕೊಂಡಿದೆ. ಸಾಮಾನ್ಯ ಜನರಲ್ಲಿ ಆರ್ಥಿಕ ಜಾಗೃತಿ ಹಾಗೂ ಜನರಲ್ಲಿ ಶಿಸ್ತು ಹಾಗೂ ವೃತ್ತಿ ಕೌಶಲ್ಯತೆ ಅಭಿವೃದ್ಧಿಪಡಿಸುವ ಉದ್ದೇಶದಿಂದ ಚಾರಿಟೇಬಲ್ ಟ್ರಸ್ಟ್ ಸ್ಥಾಪನೆ ಮಾಡಲಾಗಿದೆ ಎಂದು ಹೇಳಿ ಸ್ವಾಗತಿಸಿದರು.

ರಾಷ್ಟ್ರಪ್ರಶಸ್ತಿ ಪುರಸ್ಕೃತ ವಿಭಿನ್ನ ಸಾಮರ್ಥ್ಯದ ಜಾದೂಗಾರ ಶ್ರೀ ಸುರೇಶ್ ನಾಯಕ್ ಪುತ್ತೂರು, ಸರಸ್ವತಿ ಕ್ರೆಡಿಟ್ ಸೌಹಾರ್ದ ಸಹಕಾರಿ ಸಂಸ್ಥೆಯ ಉಪಾಧ್ಯಕ್ಷ ಶ್ರೀ ಎಂ.ಅನಂತಕೃಷ್ಣ, ಟ್ರಸ್ಟಿ ಶ್ರೀ ಚಂದ್ರಶೇಖರ ನಾಯಕ್ ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಅಂತರ ರಾಷ್ಟ್ರೀಯ ವರ್ಣ ಚಿತ್ರಕಲಾವಿದ ಶ್ರೀ ವಿಲಾಸ್ ನಾಯಕ್ ಹಾಗೂ ರಾಷ್ಟ್ರ ಪ್ರಶಸ್ತಿ ಪುರಸ್ಕೃತ ವಿಭಿನ್ನ ಸಾಮರ್ಥ್ಯ ಜಾದೂಗಾರ ಶ್ರೀ ಸುರೇಶ್ ನಾಯಕ್ ಪುತ್ತೂರು ಅವರನ್ನು ಅಭಿನಂದಿಸಲಾಯಿತು. ಸರಸ್ವತಿ ಚಾರಿಟೇಬಲ್ ಟ್ರಸ್ಟ್ ವತಿಯಿಂದ ಧನ ಸಹಾಯ ನೀಡಿದ ಶ್ರೀ ಜಯಗಣೇಶ್, ಜಯಲಕ್ಷ್ಮೀ, ಕಮಲ ಪುರುಷರಕಟ್ಟೆ, ಶ್ರೀ ಜನಾರ್ಧನ ನೇರಳಕಟ್ಟೆಯವರಿಗೆ ಪ್ರಮಾಣಪತ್ರವನ್ನು ಈ ಸಂದರ್ಭದಲ್ಲಿ ವಿತರಿಸಲಾಯಿತು.

**ರಕ್ತದಾನ ಶಿಬಿರ :** ಕಾರ್ಯಕ್ರಮದ ಅಂಗವಾಗಿ ರೋಟರಿ ಬ್ಲಡ್ ಬ್ಯಾಂಕ್, ಪುತ್ತೂರು ಇದರ ಸಹಯೋಗದಲ್ಲಿ ಬೆಳಗ್ಗೆ ದರ್ಬೆಯಲ್ಲಿರುವ ಶ್ರೀ ಸರಸ್ವತಿ ಕ್ರೆಡಿಟ್ ಸೌಹಾರ್ದ ಸಹಕಾರಿಯ ಪ್ರಧಾನ ಕಛೇರಿ ವಠಾರದಲ್ಲಿ ರಕ್ತದಾನ ಶಿಬಿರ ನಡೆಯಿತು. ಈ ಶಿಬಿರದಲ್ಲಿ ಸಹಕಾರಿಯ ಅಧ್ಯಕ್ಷರು, ನಿರ್ದೇಶಕರು ಹಾಗೂ ಸಿಬ್ಬಂದಿಗಳು ಸೇರಿದಂತೆ ಸುಮಾರು 35 ಮಂದಿ ರಕ್ತದಾನ ಮಾಡಿದರು. ■

## 8ನೇ ರಾಜ್ಯಮಟ್ಟದ ಹಲಸಿನ ಉತ್ಸವ




ಕದಂಬ ಮಾರ್ಕೆಟಿಂಗ್ ಸೌಹಾರ್ದ ಸಹಕಾರಿ ನಿ., ಶಿರಸಿ ಸಹಕಾರಿಯು 8ನೇ ರಾಜ್ಯಮಟ್ಟದ ಹಲಸಿನ ಉತ್ಸವವನ್ನು ದಿನಾಂಕ 20 ಮತ್ತು 21 ಜೂನ್ 2015ರಂದು ಬೆಳಿಗ್ಗೆ 10.00 ರಿಂದ ರಾತ್ರಿ 8.00ರವರೆಗೆ ಹವ್ಯಕ ಸಭಾಭವನ, ಕುಮಟಾ ಇಲ್ಲಿ ಏರ್ಪಡಿಸಲಾಗಿದೆ.



# ಸೌಹಾರ್ದ ಸಹಕಾರಿ ಕ್ಷೇತ್ರದ ಬೆಳವಣಿಗೆಗಾಗಿ ಸಂಯುಕ್ತ ಸಹಕಾರಿಯ ತರಬೇತಿ ಕಾರ್ಯಕ್ರಮಗಳು – ಅವಲೋಕನೆ

▸▸ ಶ್ರೀ ಬಿ.ಎ.ಮಹದೇವಪ್ಪ, ಸನ್ಮತಿ ಪ್ರತಿಷ್ಠಾನ, ಶಿವಮೊಗ್ಗ.

**ಸಂಯುಕ್ತ ಸಹಕಾರಿಯು ನಡೆಸುತ್ತಿರುವ ತರಬೇತಿ ಕಾರ್ಯಕ್ರಮಗಳಲ್ಲಿ ಭಾಗವಹಿಸುತ್ತಿರುವ ಸಂಪನ್ಮೂಲ ವ್ಯಕ್ತಿಗಳಲ್ಲಿ ಶ್ರೀ ಬಿ.ಎ.ಮಹದೇವಪ್ಪ ಒಬ್ಬರು. ಸಂಯುಕ್ತ ಸಹಕಾರಿಯ ತರಬೇತಿ ಕಾರ್ಯಕ್ರಮಗಳ ಬಗ್ಗೆ ಮಾಡಿರುವ ಅವಲೋಕನೆಯನ್ನು, ಅವರು ವ್ಯಕ್ತಪಡಿಸಿರುವ ಅನಿಸಿಕೆಗಳನ್ನು ಲೇಖನರೂಪದಲ್ಲಿ ಕಳುಹಿಸಿದ್ದಾರೆ. ಓದುಗರ ಮಾಹಿತಿಗಾಗಿ ಲೇಖನ ಪ್ರಕಟಿಸಿದೆ. ಈ ಲೇಖನದ ಬಗ್ಗೆ ಹಾಗೂ ಸಂಯುಕ್ತ ಸಹಕಾರಿಯ ತರಬೇತಿ ಕಾರ್ಯಕ್ರಮಗಳ ಬಗ್ಗೆ ತಮ್ಮ ಅನಿಸಿಕೆಗಳನ್ನು ಸಂಯುಕ್ತ ಸಹಕಾರಿಯು ಆದರದಿಂದ ಸ್ವೀಕರಿಸುತ್ತದೆ – ಸಂಪಾದಕರು**

**ಒಂದು ಉತ್ತಮ ತರಬೇತಿಯು ಮೂರು ಉದ್ದೇಶಗಳನ್ನು ಹೊಂದಿದೆ :**

1. ವರ್ತನೆಯಲ್ಲಿ ಪರಿವರ್ತನೆ (Attitudinal Changes)
2. ಕೌಶಲ್ಯ ಅಭಿವೃದ್ಧಿ (Skill Development)
3. ಜ್ಞಾನದ ಬೆಳವಣಿಗೆ (Knowledge Improvement)

**ಈ ಅಂಶಗಳನ್ನು ಆಧರಿಸಿ, ಸಂಯುಕ್ತ ಸಹಕಾರಿಯು ಸೌಹಾರ್ದ ಸಹಕಾರಿಗಳಿಗೆ ಈಗ ನೀಡುತ್ತಿರುವ ತರಬೇತಿ ಕಾರ್ಯಕ್ರಮಗಳ ಬಗ್ಗೆ ಒಂದು ಸೂಕ್ಷ್ಮಾವಲೋಕನ ಇಲ್ಲಿದೆ :**

1. ತರಬೇತಿ ಯಾರಿಗೆ ಎಂಬುದರಲ್ಲಿ ಸ್ಪಷ್ಟತೆ;
2. ತರಬೇತಿ ದಿನಾಂಕ, ಅವಧಿ ಮತ್ತು ವಿಷಯಗಳನ್ನು ನಿರ್ಧರಿಸುವಿಕೆ;
3. ತರಬೇತಿಯ ಸ್ಥಳ ಹಾಗೂ ಸೌಲಭ್ಯಗಳ ಪರಿಶೀಲನೆ;
4. ಸಂಬಂಧಿಸಿದ ತರಬೇತುದಾರರೊಂದಿಗೆ ವಿಷಯ ಮತ್ತು ಸಮಯದ ಬಗ್ಗೆ ಸಮಾಲೋಚನೆ;
5. ಅಧ್ಯಯನ ಸಾಹಿತ್ಯವನ್ನು ಶಿಬಿರಾರ್ಥಿಗಳಿಗೆ ಒದಗಿಸುವ ವ್ಯವಸ್ಥೆ;
6. ತರಬೇತಿ ಅವಧಿಯಲ್ಲಿ ಸಮಯವನ್ನು ಗೌರವಿಸುವ ವಿಧಾನ;
7. ವಿಷಯಗಳನ್ನು ಪರಿಣಾಮಕಾರಿಯಾಗಿ ತಿಳಿಸಲು ವಿಷ್ಯುಯಲ್ ಏಡ್ಸ್‌ಗಳ ಸೌಲಭ್ಯ;
8. ಪ್ರತಿ ವಿಷಯದ ಬಗ್ಗೆ ತರಬೇತಿ ಮುಗಿದ ನಂತರ ನಡೆಯುವ ಪ್ರಶ್ನೋತ್ತರ ಕಾರ್ಯಕ್ರಮ;
9. ಶಿಬಿರಾರ್ಥಿಗಳಿಂದ ಫೀಡ್‌ಬ್ಯಾಕ್ ಪಡೆದುಕೊಳ್ಳುವ ಕ್ರಮ;
10. ತರಬೇತುದಾರರನ್ನು ಗೌರವದಿಂದ ನಡೆಸಿಕೊಳ್ಳುವಿಕೆ ಮತ್ತು ಚೆಕ್ ಮೂಲಕ ಸಂಭಾವನೆ ನೀಡುವ ರೀತಿ;
11. ತರಬೇತಿ ಕಾರ್ಯಕ್ರಮದ ಉದ್ಘಾಟನೆ ಮತ್ತು ಮುಕ್ತಾಯ ಸಮಾರಂಭಗಳಲ್ಲಿ ವಿಶೇಷ ಆಹ್ವಾನಿತರು ಹೇಳುವ ಮಾರ್ಗದರ್ಶಕ ಮಾತುಗಳು;
12. "ಸ್ವಾಭಿಮಾನಿ ಸಹಕಾರಿ" ಮಾಸಪತ್ರಿಕೆಯಲ್ಲಿ ಪ್ರಕಟವಾಗುತ್ತಿರುವ, ಅಧ್ಯಕ್ಷರ ನುಡಿ, ಸಂಪಾದಕೀಯ, ತಜ್ಞರ ಲೇಖನಗಳು ಮತ್ತು ತರಬೇತಿ ಕಾರ್ಯಕ್ರಮಗಳ ಬಗ್ಗೆ ನೀಡುವ ಮಾಹಿತಿ;
13. ಎಲ್ಲಕ್ಕಿಂತಲೂ ಮುಖ್ಯವಾಗಿ ಶಿಬಿರಾರ್ಥಿಗಳ ತಂಡ ರಚನೆ, ಜವಾಬ್ದಾರಿ ಹಂಚಿಕೆ, ಮಾತನಾಡುವ ಅವಕಾಶ, ತರಬೇತಿ ಮುಗಿದ ನಂತರ ನಡೆಸುವ ಅನೌಪಚಾರಿಕ ಸಭೆ, ವಿವಿಧ ಸಹಕಾರ ಸಂಘಗಳ ಪರಿಚಯ, ಪ್ರತಿದಿನದ ಯೋಗಾಭ್ಯಾಸ, ಅಧ್ಯಾತ್ಮ, ಆಹಾರ, ಆರೋಗ್ಯ ಮುಂತಾದ ಸಾಮಾಜಿಕ ಜವಾಬ್ದಾರಿಗಳ ಚರ್ಚೆ, ಸಂಜೆಯ ಸಾಂಸ್ಕೃತಿಕ ಕಾರ್ಯಕ್ರಮ, ಪ್ರತಿದಿನದ ವರದಿ ಸಿದ್ಧಪಡಿಸುವಿಕೆ, ನಿನ್ನೆಯ ಪುನರ್‌ಮನನ (Recapitulation), ಮಿಲಿ ಮತ್ತು ಇನ್‌ಸ್ಟಂಟ್ ಮಿಲಿ, ಅಧ್ಯಯನ ಪ್ರವಾಸಕ್ಕೆ ಸ್ಥಳಗಳ ಆಯ್ಕೆ, ಶಿಬಿರಾರ್ಥಿಗಳಿಂದಲೇ ಸಮಾರೋಪ ಸಮಾರಂಭದ ವ್ಯವಸ್ಥೆ... ಇವುಗಳು ತರಬೇತಿ ಕಾರ್ಯಕ್ರಮಗಳ ಹೈಲೈಟ್ಸ್!

...ಇವೆಲ್ಲವೂ ಸಹಕಾರ ಕ್ಷೇತ್ರದ ತರಬೇತಿ ಕಾರ್ಯಕ್ರಮಗಳಲ್ಲಿ ಹೊಸ ಅಲೆಯನ್ನು ಹುಟ್ಟುಹಾಕಿರುವ ಜೊತೆಗೆ ಲೇಖನದ ಪ್ರಾರಂಭದಲ್ಲಿ ಹೇಳಿರುವ ಮೂರು ಗುಣಲಕ್ಷಣಗಳೊಂದಿಗೆ ತರಬೇತಿಯ ಗುಣಮಟ್ಟವನ್ನು ಎತ್ತಿಹಿಡಿದಿವೆ.

ತರಬೇತಿಯನ್ನು ಪಡೆದ ಸೌಹಾರ್ದ ಸಹಕಾರಿಗಳು ಇಂತಹ ಕಾರ್ಯಕ್ರಮಗಳನ್ನು ಮತ್ತೆ ಯಾವಾಗ ಮಾಡುತ್ತೀರಿ? ಎಂದು ಕೇಳುವ ಹಂತಕ್ಕೆ ಬಂದಿರುವುದನ್ನು ಗಮನಿಸಿದರೆ, ಸಂಯುಕ್ತ ಸಹಕಾರಿಗೆ ತುಂಬುಹೃದಯದ ಅಭಿನಂದನೆಗಳನ್ನು ಹೇಳಬೇಕಾಗುತ್ತದೆ.

(ಮುಂದಿನ ಸಂಚಿಕೆಗೆ...)



# ಗ್ರಾಹಕ ಸಂಬಂಧ ನಿರ್ವಹಣೆಯ ಮಹತ್ವ ಮತ್ತು ವಿವಿಧ ಹಂತಗಳು

ಡಾ॥ ನಂದೀಶ ವಿ. ಹಿರೇಮಠ, ಪ್ರೊಫೆಸರ್ ಸಹಕಾರಿ ತರಬೇತುದಾರರು, ಕನಸಲ್ಟಂಟ್ ಮತ್ತು ಆಡಳಿತ ಸಲಹೆಗಾರರು, ಬೆಂಗಳೂರು.

...ಹಿಂದಿನ ಸಂಚಿಕೆಯಿಂದ

**ಗ್ರಾಹಕ ಸಂಬಂಧ ನಿರ್ವಹಣೆಯಲ್ಲಿ ಹಂತಗಳು :**

**5. ಗ್ರಾಹಕರ ಅತ್ಯಾನಂದ (Customer Delight = Customer Intimacy + Value addition in Service)**

ಇದೇ ರೀತಿ ಹಂತ-ಹಂತವಾಗಿ ಗ್ರಾಹಕರ ಮತ್ತು ಸಂಸ್ಥೆಯ ಸಿಬ್ಬಂದಿಗಳ ಆತ್ಮೀಯತೆ ಬೆಳೆಯುತ್ತಾ ಮುಂದುವರಿಯುತ್ತದೆ. ತಮ್ಮ ಸಾಮಾನ್ಯ ಸೇವೆಗಳಿಗಿಂತ ಹೆಚ್ಚಾಗಿ ಪ್ರೀತಿ-ವಿಶ್ವಾಸದಿಂದ ಹೆಚ್ಚಿನ ನೀಡುತ್ತಾ ಖುಷಿಯಿಂದ ಸಿಬ್ಬಂದಿ-ಗ್ರಾಹಕರು ಜೊತೆಗೆ ಸಾಗಿದಾಗ 'ಗ್ರಾಹಕರ ಅತ್ಯಾನಂದ'ವನ್ನು ನಾವು ಕಾಣಬಹುದು.

**6. ಗ್ರಾಹಕರ ಪರಮಾನಂದ (Customer Bliss = Customer Delight + Error free timely service)**

ಗ್ರಾಹಕರ ಅತ್ಯಾನಂದದಲ್ಲಿ ಸಂಸ್ಥೆಯ ಸಿಬ್ಬಂದಿಗಳು ಮತ್ತು ಗ್ರಾಹಕರು ಜೊತೆಗೂಡಿ ಹೆಚ್ಚಿನ ಬೆಳವಣಿಗೆಗೆ ಕಾರಣರಾದಾಗ, ಗ್ರಾಹಕರಿಗೆ ಯಾವುದೇ ತಪ್ಪುಗಳು-ದೋಷಗಳು ಇಲ್ಲದಂತೆ ಸಮಯೋಚಿತ ಸೇವೆ ನೀಡುವಲ್ಲಿ ಸಿಬ್ಬಂದಿಗಳು ತೊಡಗಿಸಿಕೊಳ್ಳುತ್ತಾರೆ ಮತ್ತು 'ಗ್ರಾಹಕರು ಪರಮಾನಂದ'ದಿಂದ ಇರಲು ಪ್ರಯತ್ನ ಮಾಡುತ್ತಾರೆ.

**7. ಗ್ರಾಹಕರ ಮೋಹನಗೊಳಿಸುವಿಕೆ (Customer Enthralling = Customer Bliss + Best Service)**

ಗ್ರಾಹಕರ ವಿವಿಧ ರೀತಿ ಅವಶ್ಯಕತೆಗಳಿಗೆ ಅನುಗುಣವಾಗಿ ಸಂತೋಷದಿಂದ, ಸ್ವಯಂಪ್ರೇರಿತರಾಗಿ ಪ್ರೀತಿಯಿಂದ ಕೆಲಸ ನಿರ್ವಹಿಸಿದಾಗ 'ಗ್ರಾಹಕರು ಮೋಹಗೊಂಡು' ವಿಶಿಷ್ಟ ಅನುಭವ ಪಡೆಯುತ್ತಾರೆ.

**8. ಗ್ರಾಹಕರ ಪಕ್ಷ ಸಮರ್ಥನೆ (Customer Advocacy = Customer Enthralling + Customer Involvement)**

ಈ ಮೇಲಿನ ಎಲ್ಲಾ ಹಂತಗಳಲ್ಲಿ ಗ್ರಾಹಕರು ಸಂಸ್ಥೆಗಳು ಮತ್ತು ಸಿಬ್ಬಂದಿಯವರ ಜೊತೆ ಬೆರೆತು ವ್ಯವಹಾರ ಮಾಡುವಾಗ ತಾವು ಬೇರೆ- ಸಂಸ್ಥೆ ಬೇರೆ ಎಂಬ ಮನೋಭಾವನೆ ಬಿಟ್ಟು, ಇದು ನಮ್ಮ ಸಂಸ್ಥೆ ಎಂಬ ಅನುಭವ ಪ್ರಾರಂಭವಾಗುತ್ತದೆ. ನಂತರ, ತಾವು ಅದರ ಸಂಸ್ಥೆಯ ಬೆಳವಣಿಗೆ, ಅಭಿವೃದ್ಧಿಯಲ್ಲಿ ಭಾಗಿಯಾಗ ಬೇಕೆಂದು ಸಲಹೆ-ಸೂಚನೆ- ಕ್ರಿಯಾತ್ಮಕ ಪ್ರತ್ಯುತ್ತರ (feedback) ಕೊಡುತ್ತಾ ಗ್ರಾಹಕರ ಸಂಸ್ಥೆಯ ವ್ಯವಹಾರ-ಅಭಿವೃದ್ಧಿಯಲ್ಲಿ ತೊಡಗಿಕೊಳ್ಳುತ್ತಾರೆ. ಇದನ್ನು ನಾವು "ಗ್ರಾಹಕರ ಪಕ್ಷ ಸಮರ್ಥನೆ" ಎಂದು ಕರೆಯಬಹುದು. ಗ್ರಾಹಕರ ಸಂಬಂಧ ನಿರ್ವಹಣೆ – ಒಂದು ನಿರಂತರ ಪ್ರಯಾಣ ಮೇಲೆ ವಿವರಿಸಿದ ಗ್ರಾಹಕ ಸಂಬಂಧ ನಿರ್ವಹಣೆಯ ಮಹತ್ವ ಮತ್ತು ಹಂತಗಳನ್ನು ಸೂಕ್ಷ್ಮವಾಗಿ ಪರಿಗಣಿಸಿದಾಗ, ನಮಗೆಲ್ಲ ತಿಳಿಯುವ ಮುಖ್ಯ ಅಂಶವೆಂದರೆ CRM ಒಂದು ತತ್ವ (concept) ಮಾತ್ರ ಅಲ್ಲ. ಅದು ಒಂದು "ನಿರಂತರವಾದ ಪಯಣ" (Continuous movement) ಎಂದು ತಿಳಿದು ಬರುತ್ತದೆ. ಈ ನಿರಂತರ ಪಯಣಕ್ಕೆ ನಮ್ಮಿಂದ ಆದ ಎಲ್ಲ ಪ್ರಯತ್ನಗಳನ್ನು ನೀಡಿ ಸಫಲತೆ ಹೊಂದೋಣ.

**ಗ್ರಾಹಕ ಸಂಬಂಧ ನಿರ್ವಹಣೆಯಲ್ಲಿ ಪ್ರಗತಿ :** ಕಳೆದ 50-60 ವರ್ಷಗಳಲ್ಲಿ, ಗ್ರಾಹಕ ಸಂಬಂಧ ನಿರ್ವಹಣೆ ರೀತಿ-ನೀತಿಗಳು ಬಹಳಷ್ಟು ಬದಲಾವಣೆ ಹೊಂದಿವೆ ಮತ್ತು ತೀವ್ರ ವೇಗದಿಂದ ಮಾರ್ಪಾಟ್ಟಾಗುತ್ತಿದೆ. ಇತ್ತೀಚಿಗೆ 2015ರಲ್ಲಿ ಮಾಡಿದ ಒಂದು ಸರ್ವೆ (Survey) ಪ್ರಕಾರ ಐದು ಪ್ರಮುಖ ಅಂಶಗಳನ್ನು ನಾವು ಮತ್ತು ನಮ್ಮ ಸಂಸ್ಥೆಗಳು ಗಮನದಲ್ಲಿಟ್ಟುಕೊಳ್ಳಬೇಕು.

**1. ಗ್ರಾಹಕರಿಗೆ ನೀಡುವ ವಿಷಯ – ಮಾಹಿತಿ :** ಸಂಸ್ಥೆಗಳು ನೀಡುತ್ತಿರುವ ಮಾಹಿತಿ ಬಹಳಷ್ಟು ಸಮಂಜಸವಿರುವುದಿಲ್ಲ. ಆದರೆ ನಾವು ಹೆಚ್ಚು ವಿವರಗಳನ್ನು, ಕಡಿಮೆ ಅವಧಿಯಲ್ಲಿ ಹಾಗೂ ಅತ್ಯಂತ ಸಮರ್ಪಕ-ಆಕರ್ಷಕ ರೀತಿಯಲ್ಲಿ ನೀಡಿದಾಗ ಗ್ರಾಹಕರ ಜೊತೆ ಸಂಬಂಧ ಹೆಚ್ಚಾಗಿರುವುದು ಕಂಡುಬಂದಿದೆ.

**2. ವ್ಯವಹಾರದ ವ್ಯಾಪ್ತಿ :** ಪ್ರತಿಯೊಂದು ವ್ಯಾಪಾರಕ್ಕೆ ಒಂದು ನಿಗದಿತ ವ್ಯಾಪ್ತಿ ಇರುತ್ತದೆ. ಈ ವ್ಯಾಪ್ತಿಯಲ್ಲಿನ ಗ್ರಾಹಕರ ರುಚಿ-ಅಭಿರುಚಿ, ಆಸೆ- ಆಕಾಂಕ್ಷೆಗಳು ವಿಶಿಷ್ಠತೆ ಹೊಂದಿರುತ್ತವೆ. ಅವುಗಳನ್ನು ಅರಿತು ಅದರ ಪ್ರಕಾರ ಗ್ರಾಹಕರಿಗೆ ಮಾಹಿತಿ ನೀಡುತ್ತಾ, ಸಂಬಂಧ ಬೆಳೆಸುತ್ತಾ ಹೋದರೆ ಆ ಗ್ರಾಹಕರು ಬಹುಕಾಲ ಸಂಸ್ಥೆಯ ಜೊತೆ ಇರುವುದು ಕಂಡು ಬರುತ್ತದೆ.

**3. ಗ್ರಾಹಕರ ವಿಶಿಷ್ಟ ಅನುಭವ :** ಗ್ರಾಹಕರಿಗೆ ಕೇವಲ ವಸ್ತು ಮತ್ತು ಸೇವೆಗಳು (Products and Service) ಗಿಂತ, ಅವುಗಳನ್ನು ಪಡೆಯುವಾಗ ಇರುವ ಅನುಭವ ಮಹತ್ವವಾಗಿರುತ್ತದೆ. ಇಂದಿನ ಜಗತಿನಲ್ಲಿ ಗ್ರಾಹಕರಿಗೆ ಸಾಕಷ್ಟು ಅವಕಾಶಗಳಿವೆ ಮತ್ತು ಕಡಿಮೆ ಬೆಲೆಯಲ್ಲಿ ಅದೇ ವಸ್ತು/ ಸೇವೆ ಸಿಗುವಾಗ ಅವರು ಆ "ಖರೀದಿಸುವ ಅನುಭವಕ್ಕೆ" ಹೆಚ್ಚಿನ ಮಹತ್ವ ನೀಡುತ್ತಾರೆ. ಆ ಅನುಭವ ಒಳ್ಳೆಯದಾಗಿದ್ದಲ್ಲಿ ಮತ್ತೆ ಮತ್ತೆ ಬರುವ ಸಂತೃಪ್ತಿ ಗ್ರಾಹಕರಾಗುವುದು ಸಹಜ ನಿಯಮ.

**4. ಗ್ರಾಹಕರ ಜೊತೆ ಆತ್ಮೀಯತೆಯ ಹಾಗೂ ನೇರ ಸಂಬಂಧ :** ಇತ್ತೀಚಿನ ದಿನಗಳಲ್ಲಿ ಗ್ರಾಹಕರು ತಮ್ಮ ಬಗ್ಗೆ ಹೆಚ್ಚಿನ ಕಾಳಜಿ ವಹಿಸಿ, ಆತ್ಮೀಯತೆಯಿಂದ ಹಾಗೂ ನೇರವಾಗಿ ಸಂಪರ್ಕವಿಟ್ಟುಕೊಳ್ಳುವ ಸಂಸ್ಥೆಗಳ ಜೊತೆ ಹೆಚ್ಚಿನ ವ್ಯವಹಾರ ಮಾಡುವುದು ಕಂಡು ಬಂದಿದೆ. ಅರ್ಥಾತ್

ಅವರಿಗೆ ವಿಶೇಷ ಗಮನ ಕೊಡಬೇಕಾಗಿರುವುದು ಅನಿವಾರ್ಯ.

**5. ವೈವಿಧ್ಯತೆ ಹಾಗೂ ವಿನೂತನ ಹೊಂದಿದ ಗ್ರಾಹಕರೊಂದಿಗೆ ಸಂಪರ್ಕಗಳು :** ಕಳೆದ 3–5 ವರ್ಷಗಳಲ್ಲಿ ಗ್ರಾಹಕರಿಗೆ ನೀಡುವ ಮಾಹಿತಿಗಳಲ್ಲಿ, ಹೊಸತನ–ವೈವಿಧ್ಯತೆ–ವಿನೂತನ ರೀತಿಗಳನ್ನು ಕಾಣಬಹುದು. ಯಾವ ಸಂಸ್ಥೆಗಳು ಈ ಹೊಸತನದಲ್ಲಿ ತಂತ್ರಜ್ಞಾನ (technology)ವನ್ನು ಅಳವಡಿಸಿಕೊಂಡಿದ್ದಾರೋ ಅವರಿಗೆ ಸಫಲತೆ ಹೆಚ್ಚಾಗಿರುವುದನ್ನು ನಾವೆಲ್ಲ ಕಾಣಬಹುದು.

**ಗ್ರಾಹಕ ಸಂಬಂಧ ನಿರ್ವಹಣೆ (CRM)ಯಲ್ಲಿ ಮುಖ್ಯ ಅಂಶಗಳು**

- ಸಂಸ್ಥೆಯ ನಾಯಕರು ಈ ಹೊಸ ಹಾದಿಗೆ ನಂಬಿಕೆಯಿಂದ ಸಹಕರಿಸುವ ಮನೋಭಾವನೆ ಹೊಂದಿರಬೇಕು.
- ಈ CRM ತತ್ವಗಳನ್ನು ಅವಳಡಿಸುವ ಮುನ್ನ ಎಲ್ಲಿ ಸಿಬ್ಬಂದಿಗಳಲ್ಲಿ ಅಖಿಲ ಬಗ್ಗೆ ಸಮಗ್ರ ಮಾಹಿತಿ ನೀಡಿ ಅದರ ಮಹತ್ವನ್ನು ಕಾರ್ಯರೂಪಗೊಳಿಸುವ ಒಂದು ತಂಡ ನಿರ್ಮಾಣ ಮಾಡಬೇಕು.
- ಈ CRM ತಂತ್ರಗಳು ವ್ಯವಹಾರ ಮಾಡುವ ಉದ್ದೇಶ ಹಾಗೂ ಧ್ಯೇಯಗಳ ಜೊತೆಗೆ ಹೊಂದಾಣಿಕೆ ಇರಬೇಕು.
- ನಮ್ಮ ಸಂಸ್ಥೆಗೆ 'ನಿಜವಾದ ಗ್ರಾಹಕ' ಯಾರು? ಮತ್ತು ಅವರ 'ಮೂಲ ಅವಶ್ಯಕತೆಗಳು' ಏನು? ಎಂಬ ಬಗ್ಗೆ ಸಮಗ್ರ ಮತ್ತು ನಿರ್ದಿಷ್ಟ ಮಾಹಿತಿಯಿರಬೇಕು.
- ಗ್ರಾಹಕರ ಅವಶ್ಯಕತೆಗಳನ್ನು ಅವರ ನಿರೀಕ್ಷೆಗಳನ್ನು ಚೆನ್ನಾಗಿ ಗುರುತಿಸಿ, ಅವುಗಳನ್ನು ಪೂರೈಸುವಲ್ಲಿ ಪ್ರಯತ್ನ ಮಾಡಬೇಕು.
- 'ಗ್ರಾಹಕರ ವಿಶಿಷ್ಟ ಅನುಭವ' ನೀಡುವತ್ತ ಸಂಸ್ಥೆಯ ಎಲ್ಲ ನಾಯಕರು, ಅಧಿಕಾರಿಗಳು, ಸಿಬ್ಬಂದಿಗಳು ಗಮನಹರಿಸಬೇಕು.
- 'ಗ್ರಾಹಕರ ಮಾಹಿತಿ' ಸಂಸ್ಥೆಯಲ್ಲಿ ಬೇಕಾದಾಗ ತೆಗೆದು ಸಮರ್ಪಕವಾಗಿ ಉಪಯೋಗಿಸುವ ರೀತಿಯಲ್ಲಿಟ್ಟು ಕೊಳ್ಳಬೇಕು.
- 'ಹೆಚ್ಚಿನ ಮೌಲ್ಯವಿರುವ ಗ್ರಾಹಕರ' (High Value Customer) ಜೊತೆ ಸಂವಾದ ಏರ್ಪಡಿಸಿ ಗ್ರಾಹಕರ ಅವಶ್ಯಕತೆಗಳ ಬಗ್ಗೆ ಆಗಾಗ್ಗೆ ತಿಳಿದುಕೊಳ್ಳುತ್ತಾ ಇರಬೇಕು.
- ನಮ್ಮ ಸಂಸ್ಥೆಗಳಲ್ಲಿ ಗ್ರಾಹಕರನ್ನು ಸೇರಿಸಿಕೊಳ್ಳುವ, ಬೆಳೆಸುವ ಹಾಗೂ ಉಳಿಸಿಕೊಳ್ಳುವ (Customer acquisition, growth and retention) ಬಗ್ಗೆ ನಿರಂತರವಾಗಿ ಚಿಂತನೆ ಮಾಡಿ ಸೂಕ್ತ ಮಾರ್ಪಾಡು/ ಬದಲಾವಣೆ ಮಾಡುತ್ತಿರಬೇಕು.
- ಗ್ರಾಹಕರಿಗೆ ನೀಡುವ ಆ 'ಅನುಭವ' ಸಮರ್ಪಕವಾಗಿ ಕೆಲಸ ಮಾಡುತ್ತಿದೆಯೇ ಎಂದು ಪರೀಕ್ಷೆ ಮಾಡಿ, ಬೇಕಾದಲ್ಲಿ ಸಮರ್ಪಕವಾದ "ಹೊಸ ಆತ್ಮೀಯ ಅನುಭವ" ನೀಡುವ ವಿಧಾನಗಳನ್ನು ಕಂಡು ಹಿಡಿದುಕೊಳ್ಳಬೇಕು.
- ಗ್ರಾಹಕರ ಜೊತೆ ನಿರಂತರವಾದ ಮತ್ತು ಪರಿಪೂರ್ಣ ಮಾಹಿತಿ ಯೊಂದಿಗೆ ಸಂವಹನ (Communication) ಇಟ್ಟುಕೊಳ್ಳಬೇಕು.
- ಗ್ರಾಹಕ ಸಂಬಂಧ ಹೆಚ್ಚಿಸುವ ವಿಧಾನಗಳನ್ನು ಅರಿತುಕೊಂಡು ಅಳವಡಿಸಬೇಕು. ಇದರಲ್ಲಿ 'ಗ್ರಾಹಕರ ಸಭೆ' / 'ಗ್ರಾಹಕರ ಸಂಪರ್ಕ ಸಭೆ' ಬಹಳ ಮುಖ್ಯ ಪಾತ್ರ ವಹಿಸುತ್ತವೆ. ಕನಿಷ್ಠ ಮೂರು ತಿಂಗಳಿಗೊಮ್ಮೆ ಗ್ರಾಹಕ ಸಂಪರ್ಕ ಸಭೆ ಇಟ್ಟುಕೊಂಡರೆ ಬಹಳ ಅನುಕೂಲ.

ಒಟ್ಟಿನಲ್ಲಿ, ನಾವು ಈ ಮೇಲಿನ ವಿವಿಧ ಅಂಶಗಳನ್ನು ಗಮನಿಸಿದಾಗ, "ಗ್ರಾಹಕ ಸಂಬಂಧ ನಿರ್ವಹಣೆ (Customer Relationship Management)" ಒಂದು ನಿರಂತರವಾಗಿ ಬದಲಾವಣೆ ಆಗುತ್ತಿರುವ ಪದ್ಧತಿ ಎಂದು ತಿಳಿದು ಬರುತ್ತದೆ, ಅದು ಕೇವಲ ಒಂದು ತತ್ವವಲ್ಲ!" ■




ಚೆನ್ನಾಗಿ ಮೂಡಿಬರುತ್ತಿದೆ. ಇದರಲ್ಲಿ ಎಲ್ಲಾ ಬ್ಯಾಂಕುಗಳನ್ನು ಭಾಗಿ ಮಾಡಿಕೊಂಡು ಎಲ್ಲಾ ಮುಖ್ಯಕಾರ್ಯನಿರ್ವಾಹಕರು ಹಾಗೂ ಅಧ್ಯಕ್ಷರುಗಳು ಕಡ್ಡಾಯವಾಗಿ ವರ್ಷದಲ್ಲಿ ಒಂದು ತಿಂಗಳಾದರೂ ಅವರ ಲೇಖನ ಬರುವಂತೆ ಕಡ್ಡಾಯ ಮಾಡಬೇಕು. ಪುಟಗಳನ್ನು ಹೆಚ್ಚಿಸಿ. ಹೆಚ್ಚು ಹೆಚ್ಚು ಸಹಕಾರಿಗಳ ಅಧಿಕಾರಿಗಳು ಲೇಖನ ಬರೆಯಲು ಪ್ರೇರೆಪಿಸಬೇಕು.

**▸▸ ವೆಂಕಟೇಶರಾವ್ (ಸುಕೋ ಸೌಹಾರ್ದ ಸಹಕಾರಿ ಬ್ಯಾಂಕ್ ನಿ., ಬಳ್ಳಾರಿ)**

.................................................................................

ಸ್ವಾಭಿಮಾನಿ ಸಹಕಾರಿ ತುಂಬಾ ಚೆನ್ನಾಗಿ ಮೂಡಿಬರುತ್ತಿದೆ. ಇದೇ ರೀತಿಯಲ್ಲಿ ಹೊಸಹೊಸ ಅವಿಷ್ಕಾರಗಳೊಂದಿಗೆ ಮೂಡಿಬರಲಿ ಎನ್ನುವುದು ನನ್ನ ಆಶಯ ಹಾಗೂ Advanced technology ಯನ್ನು ನಮ್ಮಂತಹ ಸಣ್ಣ ಬ್ಯಾಂಕುಗಳು ಯಾವ ರೀತಿಯಲ್ಲಿ ಅಳವಡಿಸಿಕೊಂಡು ಈಗಿನ ಸ್ಪರ್ಧಾತ್ಮಕ ದಿನದಲ್ಲಿ ಮುಂದುವರಿಯುವಂತೆ ಲೇಖನಗಳನ್ನು ಸ್ವಾಭಿಮಾನಿಯಲ್ಲಿ ಪ್ರಕಟಿಸಿದರೆ ಅನುಕೂಲ ವಾಗುತ್ತದೆ. ಕೆಲವು ಬ್ಯಾಂಕುಗಳ ಯಶೋಗಾಥೆಗಳನ್ನು ಪ್ರಕಟಿಸಿದ್ದೀರಿ. ಅವುಗಳಿಂದ ನಮಗೆ ಒಂದು ರೀತಿಯಲ್ಲಿ ಪ್ರೇರಣೆಯಾಗುತ್ತದೆ. ಹೆಚ್ಚಿನ ವಿವರಗಳೊಂದಿಗೆ ಇನ್ನೂ ಚೆನ್ನಾಗಿ ಮೂಡಿ ಬರಲಿ. ಇದು ನನ್ನ ಆಶಯ.

**▸▸ ಎಮ್.ಎಸ್.ರೇಣುಕ**

(ಸಂಡೂರು ಪಟ್ಟಣ ಸೌಹಾರ್ದ ಸಹಕಾರಿ ಬ್ಯಾಂಕ್ ನಿ., ಸಂಡೂರು)

## ನಿಮ್ಮ ಪ್ರಶ್ನೆ




## ನಮ್ಮ ಉತ್ತರ

ನಿಮ್ಮ ಪ್ರಶ್ನೆ – ನಮ್ಮ ಉತ್ತರ ಈ ಅಂಕಣವನ್ನು ಪ್ರತಿ ಸಂಚಿಕೆಯಲ್ಲಿ ಪ್ರಕಟಿಸಲು ನಿರ್ಧರಿಸಲಾಗಿದೆ. ಸೌಹಾರ್ದ ಸಹಕಾರಿಗಳು ತಮ್ಮ ದಿನನಿತ್ಯದ ಕಾರ್ಯಾಚರಣೆಯಲ್ಲಿ ಎದುರಿಸುವ ಸಮಸ್ಯೆಗಳ ಪರಿಹಾರಕ್ಕಾಗಿ ಅವುಗಳನ್ನು ಪ್ರಶ್ನೆಗಳ ರೂಪದಲ್ಲಿ ಸಂಯುಕ್ತ ಸಹಕಾರಿಗೆ ಲಿಖಿತವಾಗಿ ಕಳುಹಿಸಲು ಕೋರಿದೆ. ನಿಮ್ಮ ಪ್ರಶ್ನೆಗೆ ಸಂಯುಕ್ತ ಸಹಕಾರಿಯು ನೀಡಿದ ಉತ್ತರ ಬೇರೆ ಸೌಹಾರ್ದ ಸಹಕಾರಿಗಳಿಗೂ ಮಾರ್ಗದರ್ಶನವಾಗುತ್ತದೆ – ಸಂಪಾದಕರು

**ಪ್ರಶ್ನೆ 1 : ಒಂದು ಸಹಕಾರಿಯಲ್ಲಿ ಸದಸ್ಯರಾದವರು ಇನ್ನೊಂದು ಸಹಕಾರಿಯಲ್ಲಿ ಸದಸ್ಯರಾಗಬಹುದೇ?**

**ಉತ್ತರ :** 2014ರ ಸೌಹಾರ್ದ ಸಹಕಾರಿ ಕಾಯ್ದೆಯ ತಿದ್ದುಪಡಿಯಂತೆ ಸಮಾನ ಉದ್ದೇಶದ ಎರಡು ಸಹಕಾರಿಗಳಲ್ಲಿ ಸದಸ್ಯರಾಗುವುದನ್ನು ನಿಷೇಧಿಸಿದೆ. (No provision for dual membership)

**ಪ್ರಶ್ನೆ 2 : ಸಹಕಾರಿಯು ನಾಮಮಾತ್ರ ಸದಸ್ಯರಿಂದ ಹಾಗೂ ಸದಸ್ಯೇತರರಿಂದ ನಿಧಿಗಳನ್ನು ಸಂಗ್ರಹಿಸಬಹುದೇ? (Deposits from Non members and Nominal members)**

**ಉತ್ತರ :** 2014ರ ತಿದ್ದುಪಡಿಗಳ ಪ್ರಕಾರ ನಾಮಮಾತ್ರ ಸದಸ್ಯರಿಂದ ಹಾಗೂ ಸದಸ್ಯೇತರರಿಂದ ನಿಧಿಗಳನ್ನು ಸಂಗ್ರಹಿಸಲು ಅವಕಾಶವಿರುವುದಿಲ್ಲ. (No provision for taking deposits from Non members and Nominal members)

**ಪ್ರಶ್ನೆ 3 : ಒಂದು ಸಹಕಾರಿಯವರು ಸದಸ್ಯತ್ವವನ್ನು ನಿರಾಕರಿಸಿದಾಗ ಮೇಲ್ಮನವಿಯನ್ನು ಯಾರಿಗೆ ಸಲ್ಲಿಸಬೇಕು?**

**ಉತ್ತರ :** ಸಹಕಾರಿಯಲ್ಲಿ ಸದಸ್ಯತ್ವ ನಿರಾಕರಣೆಯಾದಾಗ ಸಹಕಾರಿಗಳ ನಿಬಂಧಕರಿಗೆ ಮೇಲ್ಮನವಿಯನ್ನು ಸಲ್ಲಿಸಲು ಅವಕಾಶವಿರುತ್ತದೆ.

**ಪ್ರಶ್ನೆ 4 : ಒಂದು ಸಹಕಾರಿಯು ತನ್ನ ಶಾಖೆಗಳನ್ನು ತೆರೆಯ ಬೇಕಾದರೆ ಅನುಸರಿಸಬೇಕಾದ ಕ್ರಮಗಳೇನು?**

**ಉತ್ತರ :** ರಾಜ್ಯದ ಸಹಕಾರಿಗಳು ಶಾಖೆಗಳನ್ನು ತೆರೆಯಬೇಕಾದರೆ ಸಂಯುಕ್ತ ಸಹಕಾರಿಯ ಪೂರ್ವಾನುಮತಿ ಪಡೆಯುವುದು ಅಗತ್ಯ. ಸಹಕಾರಿಗಳು ತಮ್ಮ ವಾರ್ಷಿಕ ಸಾಮಾನ್ಯ ಸಭೆಯಲ್ಲಿ ಅನುಮೋದನೆಯನ್ನು ಪಡೆದುಕೊಂಡ ನಂತರ ಸಂಯುಕ್ತ ಸಹಕಾರಿಯ ಸುತ್ತೋಲೆ ಕ್ರ.ಸಂ:ಕರಾಸೌಸಂಸನಿ/ಸುತ್ತೋಲೆ/ಆಡಳಿತ/5 ದಿನಾಂಕ:28.06.2013 ಅನುಗುಣವಾಗಿ ಕಾರ್ಯನಿರ್ವಹಿಸುತ್ತಿರುವುದನ್ನು ಸಂಯುಕ್ತ ಸಹಕಾರಿಯು ದೃಢೀಕರಿಸಿಕೊಂಡ ನಂತರ ಶಾಖೆಯನ್ನು ತೆರೆಯಲು ಅನುಮತಿ ನೀಡುತ್ತದೆ. ಹೆಚ್ಚಿನ ವಿವರಗಳಿಗಾಗಿ ಸಂಯುಕ್ತ ಸಹಕಾರಿಯ ಸುತ್ತೋಲೆಯನ್ನು ಗಮನಿಸುವುದು.

**ಪ್ರಶ್ನೆ 5 : ಒಂದು ಸಹಕಾರಿಯ ನಿರ್ದೇಶಕ ತನ್ನ ಸ್ಥಾನಕ್ಕೆ ರಾಜೀನಾಮೆ ಸಲ್ಲಿಸಿದರೆ ಅದು ಯಾವಾಗಿನಿಂದ ಜಾರಿಗೆ ಬಂದಿದೆಯೆಂದು ತಿಳಿಯಬೇಕು?**

**ಉತ್ತರ :** 2014ರ ತಿದ್ದುಪಡಿಗಳ ಪ್ರಕಾರ ಸಹಕಾರಿಯ ನಿರ್ದೇಶಕ/ ಪದಾಧಿಕಾರಿ ತನ್ನ ಸ್ಥಾನಕ್ಕೆ ರಾಜೀನಾಮೆ ನೀಡಿದ ದಿನಾಂಕದಿಂದ 15 ದಿನಗಳೊಳಗೆ ರಾಜೀನಾಮೆ ಹಿಂಪಡೆಯದಿದ್ದಲ್ಲಿ 15 ದಿನಗಳು ಮುಗಿದ ನಂತರ ರಾಜೀನಾಮೆ ಅಂಗೀಕಾರವಾಗಿದೆಯೆಂದು ಪರಿಗಣಿಸತಕ್ಕದ್ದು ಎಂದು ಇರುತ್ತದೆ.

**ಪ್ರಶ್ನೆ 6 : ಒಂದು ಸಹಕಾರಿಯ ಸಾಮಾನ್ಯ ಸಭೆ ನಡೆಸಲು ಕೋರಂ ಎಷ್ಟಿರಬೇಕು?**

**ಉತ್ತರ :** ಸಹಕಾರಿಯ ಸಾಮಾನ್ಯ ಸಭೆಗೆ ಅಗತ್ಯ ಕೋರಂ ಅನ್ನು ಒಟ್ಟು ಅರ್ಹ ಸದಸ್ಯರ ಶೇ.10 ಅಥವಾ 1,000 ಇವುಗಳಲ್ಲಿ ಯಾವುದು ಕಡಿಮೆಯೋ ಅದು ಎಂದು ನಿಗದಿಪಡಿಸಿದೆ.

**ಪ್ರಶ್ನೆ 7 : ಸಹಕಾರಿಯ ಲೆಕ್ಕಪರಿಶೋಧಕರ ಸಂಭಾವನೆಯನ್ನು ನಿಗದಿ ಮಾಡುವ ಅಧಿಕಾರ ಯಾರಿಗೆ ಇರುತ್ತದೆ?**

**ಉತ್ತರ :** ಲೆಕ್ಕಪರಿಶೋಧಕರ ಸಂಭಾವನೆಯನ್ನು ನಿಗದಿ ಮಾಡುವ ಅಧಿಕಾರ ಸಹಕಾರಿಯ ಸಾಮಾನ್ಯ ಸಭೆಗೆ ಇರುತ್ತದೆ.

**ಪ್ರಶ್ನೆ 8 : ಸಹಕಾರಿಯ ಲೆಕ್ಕಪರಿಶೋಧಕರನ್ನು ನೇಮಕ ಮಾಡುವ ಅಧಿಕಾರ ಯಾರಿಗೆ ಇರುತ್ತದೆ?**

**ಉತ್ತರ :** ಸಹಕಾರಿಯು ಲೆಕ್ಕಪರಿಶೋಧಕರನ್ನು ತನ್ನ ಸಾಮಾನ್ಯ ಸಭೆಯಲ್ಲಿ ನೇಮಕ ಮಾಡಿಕೊಳ್ಳಲು ಅಧಿಕಾರ ಹೊಂದಿದೆ. ಒಂದು ವೇಳೆ ಸಹಕಾರಿಯು ತನ್ನ ಸಾಮಾನ್ಯ ಸಭೆಯಲ್ಲಿ ನೇಮಕ ಮಾಡಿಕೊಳ್ಳದಿದ್ದಲ್ಲಿ ಅಂತಹ ಸಹಕಾರಿಗೆ ಲೆಕ್ಕಪರಿಶೋಧಕರನ್ನು ನೇಮಕ ಮಾಡಲು ಲೆಕ್ಕಪರಿಶೋಧನಾ ನಿರ್ದೇಶಕರಿಗೆ ಅಧಿಕಾರ ನೀಡಲಾಗಿದೆ. ■

## ಸೌಹಾರ್ದ ಸಹಕಾರಿಗಳಿಗೆ ಪ್ರತ್ಯೇಕ ನ್ಯಾಯಾಲಯ

ರಾಜ್ಯದ ಸೌಹಾರ್ದ ಸಹಕಾರಿಗಳ ವ್ಯಾಜ್ಯಗಳ ವಿಲೇವಾರಿಗಾಗಿ ಪ್ರತ್ಯೇಕ ನ್ಯಾಯಾಲಯದ ಬೇಡಿಕೆಯನ್ನು ಸರಕಾರ ಪರಿಶೀಲಿಸುತ್ತಿದೆ. ಶೀಘ್ರದಲ್ಲಿ ಈ ಬಗ್ಗೆ ಸರಕಾರ ನಿರ್ಣಯವನ್ನು ತೆಗೆದುಕೊಂಡು ಪ್ರತ್ಯೇಕ ನ್ಯಾಯಾಲಯ ಮಂಜೂರು ಮಾಡುವ ಹಂತದಲ್ಲಿದೆ. ಆದ್ದರಿಂದ, ರಾಜ್ಯದ ಸೌಹಾರ್ದ ಸಹಕಾರಿಗಳು ತಮ್ಮ ಸಹಕಾರಿಯಲ್ಲಿರುವ ವ್ಯಾಜ್ಯಗಳ ಬಗ್ಗೆ ಸಂಯುಕ್ತ ಸಹಕಾರಿಯು ಕಳುಹಿಸಿರುವ ಮಾದರಿ ನಮೂನೆಯಲ್ಲಿ ಭರ್ತಿ ಮಾಡಿ ವಿವರಗಳನ್ನು ಕಳುಹಿಸಲು ಅತ್ಯಂತ ಜರೂರು ಕ್ರಮವಿಡಲು ಕೋರಿದೆ.

# RBI NEWS- MAY 2015



**K.Vittal Shetty,** B.A, DJPR, CAIIB, DBM (IIB) & MBM,
(Former Chief General Manager & CEO of SUCO BANK)

| | |
|---|---|
| BANK RATE | 8.50% |
| REPO RATE | 7.50% |
| REVERSE REPO RATE | 6.50% |
| MARGINAL STANDING FACILITY RATE | 8.50% |

**Reserve Ratios**

| | |
|---|---|
| Cash Reserve Ratio | 4% |
| Statutory Reserve Ratio | 21.5% |

| Scheduled Commercial Banks-Business In India (Rupees in Billions) | | | | | | Variation Over |
|---|---|---|---|---|---|---|
| Item | Outstanding April 2,2014 | Outstanding April 3,2015 | Outstanding April 17 2015 | Outstanding May 1, 2015 | Outstanding May 15, 2015 | Fortnight |
| 1.Aggregate Deposits | 78466.36 | 89114.9 | 87203.2 | 88126.9 | 87396.1 | -730.8 |
| Growth Per Cent | - | - | - | - | - | -0.8 |
| Demand | 7403.11 | 9523.4 | 8041.5 | 8353.6 | 7880.0 | -473.7 |
| Time | 71063.25 | 79591.5 | 79161.7 | 79773.2 | 79516.2 | 257.0 |
| 2. Investments | 22825.22 | 25501.8 | 25784.3 | 25870.7 | 26169.5 | -298.0 |
| 3.Bank Credit | 60446.06 | 69309.6 | 66039.2 | 66799.6 | 66321.1 | - 478.5 |

1. **Opening of branches/extension counters by State Co-operative Banks :** RBI has decided to revise the criteria and the procedure for submission of applications by StCBs for opening of branches/extension counters.

The revised criteria are as follows :

a. CRAR not being less than 9 per cent
b. No default in maintenance of CRR/SLR during the preceding financial year
c. Net NPA being less than 5 per cent
d. The bank should have a track record of regulatory compliance and no monetary penalty should have been imposed on the bank for violation of RBI directives/ guidelines during last two financial years. The above parameters should be as assessed by NABARD in their latest inspection report.

2. **Modalities for implementation of Pradhan Mantri Jeevan Jyoti Bima Yojana (PMJJBY) and Pradhan Mantri Suraksha Bima Yojana (PMSBY)**

Government of India, Ministry of Finance intends to roll out Pradhan Mantri Jeevan Jyoti Bima Yojana (PMJJBY) Scheme and Pradhan Mantri Suraksha Bima Yojana (PMSBY) from June 1st, 2015. Pradhan Mantri Jeevan Jyoti Bima Yojana (PMJJBY) Scheme offers life insurance worth Rs 2 lakh at Rs 330 per annum while Pradhan Mantri Suraksha Bima Yojana (PMSBY) offers accident insurance worth Rs 2 lakh at Rs 12 per annum. The schemes will be implemented by member banks and also Urban Cooperative Banks in accordance with the preliminary rules and terms finalised by the Government.

The details of the schemes are available at website www.jansuraksha.gov.in/www.financialservices.gov.in

3. **Modalities for implementation of Atal Pension Yojana (APY)**

Government of India, Ministry of Finance has announced the launch of Atal Pension Yojana (APY) on May 9, 2015. The scheme, is an universal social security measure specially for the poor and the under-privileged, which will provide a defined pension, depending on the contribution, and its period to its subscribers. The enrolment under the scheme to be introduced from June 1, 2015 has to start immediately. The APY will be focussed on all citizens in the unorganised sector, who join the National Pension System (NPS) administered by the Pension Fund Regulatory and Development Authority (PFRDA). Under the APY, the subscribers would receive the fixed minimum pension of Rs. 1000-Rs 5000 per month at the age of 60 years, depending on their contributions, which itself would be based on the age of joining the APY. The minimum age of joining APY is 18 years and maximum age is 40 years. Therefore, minimum period of contribution by any subscriber under APY would be 20 years or more. The benefit of fixed minimum pension would be guaranteed by the Government.

4. **Cancellation. Penalties and Directions on Urban Co-operative Banks**

a. RBI has cancelled the licence of Shri Swami Samarth Urban Co-operative Bank Ltd., Naldurg, Omarabad. The order was made effective from the close of business on April 30, 2015. The Registrar of Co-operative Societies Maharashtra has also been requested to issue an order for winding up of the bank and appoint a liquidator.

**The Reserve Bank cancelled the licence of the bank as:**

- The financial position was precarious and there was no scope for its revival.
- The bank did not comply with the provisions of Section 11(1), 22(3)(a) of the Banking Regulation Act, 1949 (AACS).
- The bank was not in a position to pay its present and future

Swabhimani Sahakari, Monthly, Posting Day 8th.
Posted at Bangalore PSO, Mysore Road, Bangalore 560026
Registered No. RNP/BGW/1744/2014-16. RNI No. KARBIL - 2004/18001. Pages 20

depositors in full, as and when their claims accrue.

- The affairs of the bank were being conducted in a manner detrimental to the interest of its present and future depositors.
- Public interest would have been adversely affected if the bank was allowed to carry on its banking business any further.

Consequent to the cancellation of its licence, Shri Swami Samarth Urban Co-operative Bank Ltd., Naldurg, Osmanabad, is prohibited from conducting the business of 'banking' as defined in Section 5(b) of the Banking Regulation Act, 1949 (AACS) with immediate effect.

With the cancellation of licence and commencement of liquidation proceedings, the process of paying the depositors of Shri Swami Samarth Urban Co-operative Bank Ltd., Naldurg, Osmanabad, as per the Deposit Insurance and Credit Guarantee Corporation (DICGC) Act, 1961 will be set in motion. On liquidation, every depositor is entitled to repayment of his/her deposits up to a monetary ceiling of Rs.1,00,000/- (Rupees One lakh only) from the DICGC as per usual terms and conditions.

b. The Reserve Bank of India has extended Directions issued to Dr. Babasaheb Ambedkar Nagari Sahakari Bank Maryadit, Aurangabad for a further period of six months from May 04, 2015 to November 03, 2015, subject to review. The bank was under directions since May 2012. The Directions were earlier extended on five occasions for a period of six months each.

c. The Reserve Bank of India has imposed a monetary penalty of 15.00 lakh (Rupees Fifteen lakh only) on Sri Ganesh Co-operative Bank Ltd., Gulbarga, Karnataka, in exercise of powers vested in it under the provisions of Section 47 A (1) (b) read with Section 46 (4) of the Banking Regulation Act, 1949 (As applicable to Co-operative Societies) for violation of Reserve Bank of India's instructions for violating Know Your Customers (KYC)/Anti Money Laundering (AML) Guidelines in issuing 'at par cheques' to large number of walk-in-customers by intentionally structuring them below Rs. 50,000/-. Further, it had opened benami accounts and allowed huge cash deposits in such accounts.

The Reserve Bank of India had issued a Show Cause Notice to the bank, in response to which the bank submitted a written reply. After considering the facts of the case and bank's reply in the matter, the Reserve Bank came to the conclusion that the violations were established beyond doubt and warranted imposition of the penalty.

d. The Reserve Bank of India has extended Directions issued to Vitthal Nagari Sahakari Bank Ltd., Latur, Maharashtra for a further period of three months from May 15, 2015 to August 14, 2015, subject to review. The bank was under directions since November 15, 2013. The Directions were earlier extended on three occasions for a period of six months each.

e. The Reserve Bank of India has extended Directions issued to Lokseva Sahakari Bank Ltd., Pune, Maharashtra for a further period of six months from May 20, 2015 to November 19, 2015, subject to review. The bank was under directions since May 19, 2014. The Directions were earlier extended for a period of six months.

Prepaid Payment Instruments (PPI) for Mass Transit System (PPI-MTS).

The Reserve Bank of India has placed on its website for comments and feedback the draft guidelines on Prepaid Payment Instruments (PPI) for Mass Transit System (PPI-MTS). Comments may be e-mailed or sent by post to the Chief General Manager, Department of Payment and Settlement Systems, Reserve Bank of India, Central Office, 14th Floor, Shahid Bhagat Singh Marg, Mumbai-400 001 on or before June 15, 2015.

The Reserve Bank of India has been receiving requests from various segments, including providers of mass transit services, such as, metro train and road transport services, indicating the need for PPIs catering to the requirements of this segment to enhance commuter convenience. It was felt that a separate category of semi-closed PPI for mass transit systems which handle a large number of small value cash payments will facilitate the migration to electronic payments in line with the country's vision of moving to a less-cash society.

The PPI-MTS can be used within the mass transit systems and will have a minimum validity of six months from date of issue. Such PPIs will be reloadable instruments subject to an outstanding limit of 2,000/- at any point of time. ■

ಬೆಂಗಳೂರು ವಿಭಾಗೀಯ ಕಛೇರಿ : ನಂ. 141, 1ನೇ ಮೈನ್,1ನೇ ಕ್ರಾಸ್, ಡಾ.ರಾಜ್‌ಕುಮಾರ ರಸ್ತೆ, 1-PÉ¨ÁPï, ರಾಜಾಜಿನಗರ, ಬೆಂಗಳೂರು.500 010. zÀ: 080 23525546
ಮೈಸೂರು ವಿಭಾಗೀಯ ಕಛೇರಿ : ನಂ. 200, ಶಂಕರ ಮಠ ಮುಖ್ಯರಸ್ತೆ, ಕಿಲ್ಲೇ ಮೊಹಲ್ಲಾ, ಮೈಸೂರು.
ಬೆಳಗಾವಿ ವಿಭಾಗೀಯ ಕಛೇರಿ : ಸಂಜೋಗ ಬಿಲ್ಡಿಂಗ್, ಪಿ ಅಂಡ್ ಟಿ ಕ್ವಾಟರ್ಸ್ ಹತ್ತಿರ, ಡಬ್ಬಲ್ ರೋಡ್, ಮಹಾಂತೇಶನಗರ, ಬೆಳಗಾವಿ. ದೂರವಾಣಿ : 0831–2401551
ಕಲಬುರಗಿ ವಿಭಾಗೀಯ ಕಛೇರಿಯ : ನಂ. 1–4/3 ಎ ಸಂಜೀವರಾವ್ ದೇಸಾಯಿ ಬಡಾವಣೆ, ಕೆ.ಎಸ್.ಆರ್.ಟಿ.ಸಿ. ಗೆಸ್ಟ್‌ಹೌಸ್ ಹಿಂಭಾಗ ಗಾರ್ಡನ್ ರಸ್ತೆ, ಕಲಬುರಗಿ – 585102. ದೂ. 08472–270222.

Edited, Printed and Published by Sharangouda G. Patil –Managing Director, on behalf of Karnataka State Souharada Federal Co operative Ltd., Nirman Bhavan complex, Dr. Rajkumar Road, 1st Block, Rajajinagar, Bangalore-560 010